# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಪ್ರಧಾನಿ ನರೇಂದ್ರ ಮೋದಿ ಅವರು ಮೇ 30, 2024 ರಿಂದ ಜೂನ್ 1, 2024ರವರೆಗೆ ಕನ್ಯಾಕುಮಾರಿಯ ಸ್ವಾಮಿ ವಿವೇಕಾನಂದ ಶಿಲಾ ಸ್ಮಾರಕಕ್ಕೆ ಭೇಟಿ ನೀಡಿ ಧ್ಯಾನ ಮಂಟಪದಲ್ಲಿ ಮೂರು ದಿನಗಳ ಕಾಲ ಧ್ಯಾನದಲ್ಲಿ ತೊಡಗಿಕೊಂಡರು.


ಸಂಪುಟ : 46 | ಸಂಚಿಕೆ : 04 | ವೈಶಾಖ–ಜ್ಯೇಷ್ಠ | ಕಲಿಯುಗಾಬ್ದ 5126 | 15–06–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಯೋಗವೇ ಜೀವನ–ಅದುವೇ ಭಾರತೀಯ ದರ್ಶನ

■ ವಿಶ್ವೇಶ್ವರ ಶರ್ಮ

ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯ ದಿನ ಪ್ರಪಂಚಾದ್ಯಂತ ಯೋಗದ ಬಗ್ಗೆ ಚರ್ಚೆಗಳು ಹಾಗೂ ಸಾಮೂಹಿಕ ಯೋಗ ಪ್ರದರ್ಶನ/ಅಭ್ಯಾಸಗಳು ನಡೆಯುತ್ತವೆ. ಆದರೆ ಜಗತ್ತಿಗೆ ಯೋಗವನ್ನು ನೀಡಿದ ಹೆಗ್ಗಳಿಕೆಗೆ ಪಾತ್ರವಾದ ರಾಷ್ಟ್ರ ಭಾರತವೂ ಸೇರಿದಂತೆ ವಿಶ್ವದಾದ್ಯಂತ ಜೂನ್ 21 ಮಾತ್ರ ಯೋಗ ದಿನವೇ? ಯೋಗವೆನ್ನುವುದು ಒಂದು ದಿನಕ್ಕೆ ಸೀಮಿತವಾದದ್ದೇ? ಹಾಗಾದರೆ ಯೋಗ ಅಂದರೆ ಏನು? ವ್ಯಾಯಾಮವೇ ಯೋಗವೇ, ದೈಹಿಕ ಸಾಧನೆಯೇ ಯೋಗವೇ?

ಯೋಗ ಅಂದರೆ ಸಂಬಂಧ, ಉಪಾಯ, ಜ್ಞಾನ, ಸಂಗತಿ, ಸೇರುವುದು, ಯುಕ್ತಿ – ಹೀಗೆ ಅನೇಕ ಅರ್ಥಗಳಿವೆ. ಪತಂಜಲಿ ಮಹರ್ಷಿಗಳು "ಯೋಗಃ ಚಿತ್ತ ವೃತ್ತಿ ನಿರೋಧಃ" ಎಂಬ ಸೂತ್ರದ ಮುಖಾಂತರ ಸ್ಪಷ್ಟಪಡಿಸಿದ್ದಾರೆ. ಮನಸ್ಸು ಎಲ್ಲಾ ಇಂದ್ರಿಯಗಳ ವ್ಯಾಪಾರಕ್ಕೂ ಕಾರಣ. ಅಂತಹ ಮನಸ್ಸನ್ನು ವಿಷಯಂತರಗಳಲ್ಲಿ ಹೋಗದಂತೆ ತಡೆಗಟ್ಟಿ ಆತ್ಮಾಭಿಮುಖವಾಗುವಂತೆ ಮಾಡುವ ಸಾಧನವೇ ಯೋಗ. ಕಟೋಪನಿಷತ್ತಿನಲ್ಲಿ "ತಾಂ ಯೋಗಮಿತಿ ಮನ್ಯಂತೆ ಸ್ಥಿರಮೀಂದ್ರಿಯ ಧಾರಣಂ" ಅಂದರೆ ಬಾಹ್ಯವಾದ ವಿಷಯಾಂತರದಲ್ಲಿ ಹೋಗದೇ ಇಂದ್ರಿಯಗಳನ್ನು ಅಂತರಾತ್ಮದಲ್ಲಿ ನಿಲ್ಲಿಸುವ ಸಾಧನವನ್ನೇ ಯೋಗವೆಂದು ಹೇಳಲಾಗಿದೆ. ಹೇಗೆ ತಾಮ್ರದ ಪಾತ್ರೆಯನ್ನು ನಿತ್ಯ ತೊಳೆದಾಗ ಮಾತ್ರ ಅದರಲ್ಲಿ ಹೊಳಪನ್ನು ಕಾಣಬಹುದೋ ಹಾಗೆ ನಿತ್ಯ ನಿಯಮಿತ ಅಭ್ಯಾಸದಿಂದ ಹಾಗೂ ಗುರುಹಿರಿಯರ ಮಾರ್ಗದರ್ಶನದಿಂದ ಮಾತ್ರ ಯೋಗವನ್ನು ಸಿದ್ಧಿಸಿಕೊಳ್ಳಬಹುದು.

ಪತಂಜಲಿ ಮಹರ್ಷಿಗಳು ಈ ಅತ್ಯುನ್ನತವಾದ ಸಾಧನೆಯನ್ನು ಮಾಡಲು ಅಷ್ಟಾಂಗಯೋಗವೆಂಬ 8 ಮೆಟ್ಟಿಲುಗಳನ್ನು ಹಾಕಿ ಕೊಟಿದ್ದಾರೆ. ಯಮ,



ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಹಾಗೂ ಸಮಾಧಿ ಎಂಬ ಎಂಟು ಸೂತ್ರಗಳ ಮುಖಾಂತರ ಅತ್ಯುನ್ನತವಾದ ಸಾಧನೆಯನ್ನು ಮಾಡಬಹುದು ಎನ್ನುವುದನ್ನು ತಿಳಿಸಿಕೊಟಿದ್ದಾರೆ. ಇದರಲ್ಲಿ ಮೊದಲ ಐದನ್ನು ಬಹಿರಂಗ ಸಾಧನೆ ಹಾಗೂ ಕೊನೆಯ ಮೂರನ್ನು ಅಂತರಂಗ ಸಾಧನೆ ಎಂದು ವಿಂಗಡಿಸಬಹುದು.

**ಬಹಿರಂಗ ಸಾಧನೆ:** ಯಮ ನಿಯಮಗಳೆರಡೂ ಐದೈದು ಅಂಶಗಳನ್ನು ಹೊಂದಿವೆ. ಇವು ಯೋಗಿಯ ಸಾಧನೆಗೆ ನೈತಿಕ ತಳಹದಿಯನ್ನು ಒದಗಿಸುತ್ತವೆ. ಧ್ಯಾನಾಭ್ಯಾಸಕ್ಕಾಗಿ ಸ್ಥಿರವಾಗಿ, ಸುಖವಾಗಿ ಕುಳಿತುಕೊಳುವ ಅಂಗವಿನ್ಯಾಸವೇ ಆಸನ. ಉಸಿರಿನ ನಿಯಂತ್ರಣದ ಮೂಲಕ ದೇಹಂತರ್ಗತವಾದ ಪ್ರಾಣಶಕ್ತಿಯನ್ನು ಹಾಗೂ ಮನಸ್ಸನ್ನೂ ನಿಗ್ರಹಿಸುವ ಸಾಧನವೇ ಪ್ರಾಣಾಯಾಮ. ಇಂದ್ರಿಯಗಳನ್ನು ವಿಷಯ ವಸ್ತುಗಳಿಂದ ಹಿಂದಿರುಗಿಸುವಾಗ ಅವು ಚಿತ್ತದಲ್ಲಿ (ಮನಸ್ಸಿನಲ್ಲಿ) ಲಯವಾದಂತೆ ಅವ್ಯಕ್ತವಾಗಿ ಇರುವುದೇ ಪ್ರತ್ಯಾಹಾರ


**ಅಂತರಂಗ ಸಾಧನೆ:** ಧಾರಣೆ, ಧ್ಯಾನ ಹಾಗೂ ಸಮಾಧಿ – ಒಂದೇ ಸಾಧನೆಯ ಮೂರು ಹಂತಗಳು. ಆದ್ದರಿಂದ ಈ ಮೂರನ್ನು ಸಂಯಮ ಎಂದು ನಿರ್ದೇಶಿಸಲಾಗಿದೆ. ಒಮ್ಮೆ ಈ ಸಂಯಮವು ಸಿದ್ಧಿಸಿದರೆ, ಚಿತ್ತವನ್ನು ಯಾವ ವಸ್ತುವಿನ ಮೇಲಾದರೂ ಸ್ಥಿರಗೊಳಿಸಿ ಸಂಯಮವನ್ನು ಪಡೆಯಬಹುದು.

ಯಮ ನಿಯಮಗಳ ಅಂಗ, ಉಪಾಂಗಗಳನ್ನು ಅಭ್ಯಾಸ ಮಾಡಬೇಕಾದರೆ ಮೊದಲು ಶರೀರವು ರೋಗ, ಋಣ, ದಾರಿದ್ರ್ಯಗಳಿಗೆ ಬಲಿಯಾಗಬಾರದು. "ಶರೀರ ಮಾಧ್ಯಂ ಖಲು ಧರ್ಮ ಸಾಧನಂ" ಎಂಬ ಭಗವದ್ಗೀತೆಯ ಉಕ್ತಿಯಂತೆ ಶರೀರವೆಂಬ ಮಾಧ್ಯಮವನ್ನು ಯಾವುದೇ ರೋಗಾದಿ ಉಪದ್ರವಗಳು ಬಾರದಂತೆ ತಡೆಗಟ್ಟಿ ಶರೀರ, ಇಂದ್ರಿಯ ಹಾಗೂ ಮನಸ್ಸನ್ನು ದೃಢಗೊಳಿಸಬೇಕು. ಆಸನಗಳ ಅಭ್ಯಾಸದಿಂದ ಶರೀರವನ್ನು ದೃಢಗೊಳಿಸಬಹುದು.

ಯೋಗ ಎಂಬುದು ವ್ಯಕ್ತಿ, ಸಮಾಜ ಹಾಗೂ ಇಡೀ ಬ್ರಹ್ಮಾಂಡದ ಒಂದು ಅಂಶ. ವ್ಯಕ್ತಿಯ ಸಮಗ್ರ ಬೆಳವಣಿಗೆಗಾಗಿ ಇಂದು ಯೋಗ ಎಲ್ಲರಿಗೂ ಅತ್ಯವಶ್ಯಕ. ವಿಶೇಷವಾಗಿ ಇಂದಿನ ಹೊಸ ಪೀಳಿಗೆಗೆ ಮೌಲ್ಯಗಳು ಹಾಗೂ ಸಂಸ್ಕಾರಗಳನ್ನು ನಾವೇ ತಿಳಿಸಿ ಕೊಡಬೇಕಿದೆ. ನಮ್ಮ ಪೂರ್ವಜರು ನಮಗೆ ಕೊಟ್ಟಂತಹ ಅಮೂಲ್ಯವಾದ ಹಾಗೂ ಬೆಲೆ ಕಟ್ಟಲಾಗದಂತಹ ಆಸ್ತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಪೂರ್ಣ ಜವಬ್ದಾರಿ ನಮ್ಮದೆ. ಯೋಗದಿಂದ ಆರೋಗ್ಯ, ಆರೋಗ್ಯದಿಂದ ಮಾನಸಿಕ ಹಾಗೂ ದೈಹಿಕ ಶಕ್ತಿ. ಅದರಿಂದ ಉತ್ತಮವಾದ ಸಮಾಜದ ನಿರ್ಮಾಣ ಸಾಧ್ಯ. Each One Teach One ಅನ್ನುವ ಹಾಗೆ ಪ್ರತಿಯೊಬ್ಬರೂ ಯೋಗವನ್ನು ಕೇವಲ ವ್ಯಾಯಾಮವಾಗಿ ಕಾಣದೆ, ಅಷ್ಟಾಂಗಯೋಗವೆಂಬ ಭಾರತೀಯ ಜೀವನದರ್ಶನವನ್ನು ಜೀವನಶೈಲಿಯಾಗಿಸುವಲ್ಲಿ ಪ್ರಯತ್ನಪಡೋಣ. ■

## ತುರ್ತುಪರಿಸ್ಥಿತಿಯೆಂಬ ಅಸಂವಿಧಾನಿಕ ದುರಂತಕ್ಕೆ 49 ವರ್ಷ

ಭಾರತದ ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ ಈ ನಾಡಿನ ಸಾರ್ವಭೌಮತೆಗೆ, ಪ್ರಜಾಪ್ರಭುತ್ವಕ್ಕೆ, ಸಂವಿಧಾನದ ಆಶಯಗಳಿಗೆ ಒದಗಿದ ಬೃಹತ್ ಸಂಕಷ್ಟ ಇಂದಿರಾಗಾಂಧಿಯವರ ಕಾಂಗ್ರೆಸ್ ಸರ್ಕಾರದಿಂದಲೇ ಜಾರಿಯಾದ 'ಆಂತರಿಕ ತುರ್ತುಪರಿಸ್ಥಿತಿ'. ಯಾವ ಸರ್ಕಾರವನ್ನು ಇಡೀ ದೇಶದ ಜನಾದೇಶದ ಪ್ರತಿಫಲವೆನ್ನುತ್ತೇವೆಯೋ, ಜಾಗತಿಕವಾಗಿ ಭಾರತದ ಧ್ವನಿ ಎಂದು ಸಂಬೋಧಿಸುತ್ತೇವೆಯೋ ಅದೇ ಸರ್ಕಾರ ಅಧಿಕಾರದ ದಾಹದಿಂದಾಗಿ ಪ್ರಜಾಪ್ರಭುತ್ವವನ್ನೂ, ಅದನ್ನು ಸಾರುವ ಸಂವಿಧಾನವನ್ನೂ ಮೂಲೆಗುಂಪಾಗಿಸಿತ್ತು. ಜಗತ್ತಿನೆದುರು ದೇಶ ತಲೆತಗ್ಗಿಸುವಂತೆ ಮಾಡಿತ್ತು.




1975ರ ಜೂನ್ 25 ಮಧ್ಯರಾತ್ರಿಯಿಂದ ಜಾರಿಯಾದ ಆಂತರಿಕ ತುರ್ತುಪರಿಸ್ಥಿತಿ 1977ರ ಮಾರ್ಚ್ 21ರ ಬೆಳಗ್ಗೆ ಮುಕ್ತಾಯಗೊಂಡಿತು. ಸುಮಾರು ಎರಡು ವರ್ಷಗಳ ಕಾಲ ತಮ್ಮ ಸರ್ವಾಧಿಕಾರಿ ಧೋರಣೆಯಿಂದ ಸಂವಿಧಾನವೇ ಕೊಡಮಾಡಿದ್ದ ಜನಸಾಮಾನ್ಯರ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡು ಅಕ್ಷರಶಃ ನರಕಸದೃಶ ದಿನಗಳನ್ನು ಕಾಣುವಂತೆ ಮಾಡಿತ್ತು. ಆದರೆ ವಿದೇಶಿಗರ ಆಳ್ವಿಕೆಯಿಂದ ಮೊದಲಾಗಿ ಅವರ ಬಾಲಬುಡುಕರಂತೆ ವರ್ತಿಸಿದ ಸ್ವದೇಶಿಯರವರೆಗೂ ಯಾರೆಲ್ಲಾ ಈ ನಾಡಿನ ಸಾರ್ವಭೌಮತೆಗೆ ಧಕ್ಕೆಯನ್ನುಂಟು ಮಾಡುವ ಕೆಲಸಗಳನ್ನು ಮಾಡಿದ್ದರೋ ಅವರಿಗೆ ತಕ್ಕ ಪಾಠವನ್ನು ಭಾರತೀಯರು ಕಲಿಸದೇ ಬಿಡಲಿಲ್ಲ. ಈ ಘಟನೆಯಲ್ಲೂ ಕೂಡ, ನಾಡಿಗೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷವೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಅಂದಿನ ಪ್ರಧಾನಿ ಇಂದಿರಾಗಾಂಧಿಯವರ ಸರ್ಕಾರ ಮತ್ತು ಅವರ ಸಹವರ್ತಿಗಳಿಗೂ ಅರ್ಥವಾಗುವ ರೀತಿಯಲ್ಲೇ ಜನರು ತಿಳಿಹೇಳಲು ಹಿಂಜರಿಯಲಿಲ್ಲ. ಪರಿಣಾಮವಾಗಿ ಅಂತಹ ಎಲ್ಲಾ ದನಿಗಳನ್ನು ದಮನಿಸುವ ಎಲ್ಲಾ ರೀತಿಯ ಪ್ರಯತ್ನಗಳನ್ನು ಆಡಳಿತದ ಮೂಲಕ ಮಾಡಿದ್ದು ಸುಳ್ಳಲ್ಲ.

ನಾನಾ ಮಜಲುಗಳಲ್ಲಿ ಶ್ರಮಿಸಿ 1947ರಲ್ಲಿ ಪಡೆದ ಸ್ವರಾಜ್ಯದಲ್ಲಿ ಮತ್ತೊಮ್ಮೆ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಡಬೇಕಾದ ವಾತಾವರಣ ನಿರ್ಮಾಣವಾಗಿತ್ತು. ರಾಷ್ಟ್ರಾದ್ಯಂತ ರಾಷ್ಟ್ರೀಯ ಸ್ವಯಂಸೇವಕ ಸಂಘ ಈ ಅಸಾಂವಿಧಾನಿಕ ನಡೆಯ ವಿರುದ್ಧ ದನಿ ಎತ್ತಿತ್ತು. ಆಗಿನ ಸಂಘದ ಸರಸಂಘಚಾಲಕರಾಗಿದ್ದ ಬಾಳಸಾಹೇಬ್ ದೇವರಸ್, ಸಂಘದ ಪ್ರಮುಖರಾದ ನಾನಾಜಿ ದೇಶ್‌ಮುಖ್, ಮದನ್ ಲಾಲ್ ಖುರಾನಾ ದೇಶವ್ಯಾಪಿ ಇದರ ವಿರುದ್ಧ ದನಿಯನ್ನು ವಿಸ್ತರಿಸಿದರು. ಅದರ ಪರಿಣಾಮ ಕರ್ನಾಟಕದಲ್ಲೂ ಪ್ರಜಾಪ್ರಭುತ್ವ ವಿರೋಧಿ ನಡೆಯನ್ನು ವಿರೋಧಿಸಿ ಅನೇಕ ಹೋರಾಟಗಳಾದವು. ಕರ್ನಾಟಕದಲ್ಲಿ ಪೊಲೀಸರ ಲಾಠಿಪ್ರಹಾರದಿಂದ ಗಾಯಗೊಂಡ ಸತ್ಯಾಗ್ರಾಹಿಗಳು, ಪೊಲೀಸ್ ಠಾಣೆಗಳಲ್ಲಿ ದೌರ್ಜನ್ಯಕ್ಕೆ ತುತ್ತಾದವರ ಒಟ್ಟು ಸಂಖ್ಯೆ 1917. ದೇಹದ ಯಾವುದಾದರೂ ಒಂದು ಅಂಗ ಶಾಶ್ವತವಾಗಿ ಊನವಾದವರ ಸಂಖ್ಯೆ ನೂರಕ್ಕೂ ಹೆಚ್ಚಿದೆ. ಅಧಿಕಾರದ ದಾಹಕ್ಕೆ ಬಲಿಯಾದವರ ಸಂಖ್ಯೆಯೂ ಹಲವಿದೆ. ಸತ್ಯಾಗ್ರಹದಿಂದಾಗಿ ಆರೋಗ್ಯದಲ್ಲಿ ಏರುಪೇರಾಗಿ ಮೃತನಾದ ತಂದೆ ತಾಯಿಗೆ ಒಬ್ಬನೇ ಮಗನಾದ ಆನೇಕಲ್ಲಿನ ನಾಗರಾಜ, ಕಾರಾಗೃಹದಲ್ಲಿನ ನಿರ್ಲಕ್ಷ್ಯದಿಂದ ಸಾವನ್ನಪ್ಪಿದ ಸೈಯದ್ ಸಲಾಮ್ ಸಾಬ್, ಸೆರೆಮನೆಯಲ್ಲಿ ಸರಿಯಾದ ವೈದ್ಯಕೀಯ ಉಪಚಾರವಿಲ್ಲದೆ ಸೆರೆಮನೆಯಿಂದ ಬಿಡುಗಡೆಗೊಂಡ ನಾಲ್ಕೇ ದಿನಕ್ಕೆ ಮರಣವನ್ನಪ್ಪಿದ ಸ್ನೇಹಲತಾ ರೆಡ್ಡಿ, ಖಾಯಿಲೆಯಿದ್ದರೂ ಸತ್ಯಾಗ್ರಹಕ್ಕೆ ಧುಮುಕಿದ ಜಿಗಣಿಯ ಜಿ ಆರ್ ನಾರಾಯಣ ರೆಡ್ಡಿ ಬಂಧನಗೊಂಡು ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಕೊನೆಯುಸಿರೆಳೆದರು. ತಮ್ಮ ಸತ್ಯಾಗ್ರಹದಿಂದಾಗಿ, ನ್ಯಾಯಕ್ಕಾಗಿ ಮಾಡಿದ ಹೋರಾಟದಿಂದಾಗಿ ಅವರ ಮನೆಯವರೂ ಕಷ್ಟಪಡುವಂತಾಗಿರುವುದನ್ನು ಸಹಿಸಲಾಗದೇ ಆತ್ಮಹತ್ಯೆ ಮಾಡಿಕೊಂಡವರೂ, ಹೃದಯಾಘಾತಕ್ಕೆ ಒಳಗಾದವರೂ ಅನೇಕರು.

ರಾಷ್ಟ್ರದಲ್ಲಾಗುತ್ತಿದ್ದ ಅನ್ಯಾಯದ ವಿರುದ್ಧ ದೇಶಾದ್ಯಂತ ವಿರೋಧಗಳು ವ್ಯಕ್ತವಾದವು. ವಿರೋಧಗಳನ್ನು ಮಟ್ಟ ಹಾಕುವುದಕ್ಕೆ ಸರ್ಕಾರ ಏನೇ ನಿರ್ಣಯಗಳನ್ನು ತೆಗೆದುಕೊಂಡರೂ ಅವುಗಳಿಗೆ ಲೆಕ್ಕಿಸದೇ ಹೋರಾಟವು ಕ್ರಾಂತಿಯಾಗಿ ಪರಿವರ್ತಿಸಿತು. ರಾಷ್ಟ್ರವ್ಯಾಪಿ ಜನರನ್ನು ಜಾಗೃತಗೊಳಿಸುವ ಸಲುವಾಗಿ ಭೂಗತ ಹೋರಾಟಗಳು, ಸಾಗರದಾಚೆಯ ಭಾರತೀಯರ ಸಮರ್ಥನೆಯೊಂದಿಗೆ ತೀವ್ರಗೊಂಡವು. ಮಾಧ್ಯಮಗಳ ಮೇಲೆ ಸುದ್ದಿ ಬಿತ್ತರಿಸುವಿಕೆಯಲ್ಲೂ ಹಸ್ತಕ್ಷೇಪ ಮಾಡಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದರೂ ನೂರಾರು ಪತ್ರಿಕೆಗಳು ಅತ್ಯಂತ ಕಟುವಾಗಿ ಸರ್ಕಾರದ ನಿರ್ಧಾರವನ್ನು ಟೀಕಿಸಿದವು. ಕರ್ನಾಟಕದಲ್ಲಿ ಕಹಳೆ ಎಂಬ ಭೂಗತ ಪತ್ರಿಕೆಯೇ ಪ್ರಾರಂಭಗೊಂಡಿತು. ಅಮೆರಿಕಾ, ಬ್ರಿಟನ್, ಜರ್ಮನಿ ಮುಂತಾದ ರಾಷ್ಟ್ರಗಳಲ್ಲೂ ಭಾರತೀಯರ ಪ್ರಜಾಸತ್ತಾತ್ಮತೆಯ ವಿರುದ್ಧದ ಈ ನಿರ್ಧಾರವನ್ನು ಅನೇಕ ಸಂಸ್ಥೆಗಳು, ಪತ್ರಿಕೆಗಳು ಟೀಕಿಸಿದವು. ಅಮೇರಿಕಾದಲ್ಲಿ ಸ್ಥಾಪನೆಯಾದ 'ಇಂಡಿಯನ್ಸ್ ಫಾರ್ ಡೆಮಾಕ್ರಸಿ' ಮತ್ತು ಇಂಗ್ಲೆಂಡಿನ 'ಫ್ರೆಂಡ್ಸ್ ಆಫ್ ಇಂಡಿಯಾ ಸೊಸೈಟಿ' ಪರಸ್ಪರ ಸಂಪರ್ಕವನ್ನಿಟ್ಟುಕೊಂಡು ವಿಶ್ವದ ಇತರೆ ರಾಷ್ಟ್ರಗಳಲ್ಲಿ ತಮ್ಮ ಕೇಂದ್ರಗಳನ್ನು ಸ್ಥಾಪಿಸಿ, 82 ದೇಶಗಳ ಭಾರತೀಯರ ಜೊತೆ ಸಂಪರ್ಕ ಸಾಧಿಸಿತ್ತು.

ಆಂತರಿಕ ತುರ್ತುಪರಿಸ್ಥಿತಿ ನಿರ್ಧಾರದ ವಿರುದ್ಧ ಭಾರತ ಸೇರಿದಂತೆ ಜಾಗತಿಕವಾಗಿ ನಡೆಯುತ್ತಿದ್ದ ಹೋರಾಟಗಳು, ಪ್ರತಿಭಟನೆಗಳು 1977ರ ಆರಂಭದಲ್ಲಿ ತೀವ್ರವಾದವು. ಜನವರಿ 18, 1977ರಂದು ಚುನಾವಣೆಯ ದಿನಾಂಕ ಘೋಷಣೆಯಾಗಿದ್ದಲ್ಲದೇ ತೀವ್ರವಾಗಿದ್ದ ಹೋರಾಟದ ಕಾವಿಗೆ ಬಗ್ಗಿ ಜೈಲಿನಲ್ಲಿದ್ದ ಅನೇಕ ಮಂದಿ ವಿರೋಧಪಕ್ಷದ ನಾಯಕರನ್ನು ಬಿಡುಗಡೆಗೊಳಿಸಲಾಯಿತು. ಹೀಗೆ ಸ್ವತಂತ್ರ ಭಾರತದ ಜನತೆ ಇಂದಿರಾಗಾಂಧಿಯವರ ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವಕ್ಕೆ ಮಾಡಿದ ಹಾನಿಯನ್ನು ಪ್ರಜಾಪ್ರಭುತ್ವದ ಮೂಲಕವೇ ಸರಿಪಡಿಸಲು ಒಂದಾಯಿತು. ಆಡಳಿತದಲ್ಲಿದ್ದ ಸರ್ಕಾರವನ್ನು ಕೆಳಗಿಳಿಸಿ ನೂತನ ಸರ್ಕಾರವನ್ನು ತಂದು ಸಂವಿಧಾನವನ್ನು ಉಳಿಸುವುದಕ್ಕೆ ಪಣತೊಟ್ಟರು. ತಮ್ಮ ಮೂಲಭೂತ ಹಕ್ಕುಗಳ ವಿರುದ್ಧ ಜಾರಿಯಾದ ಆಂತರಿಕ ತುರ್ತುಪರಿಸ್ಥಿತಿಯನ್ನು ಮತದಾನವೆಂಬ ತಮ್ಮ ಕರ್ತವ್ಯದ ಮೂಲಕವೇ ಸರಿಪಡಿಸಿಕೊಂಡರು. 21 ತಿಂಗಳುಗಳ ಕಾಲ ಅನುಭವಿಸಿದ ನರಕಯಾತನೆಗೆ ಅಂತ್ಯ ಹಾಡಿದರು. ಇಂದಿಗೂ ಪ್ರಜಾಪ್ರಭುತ್ವವನ್ನು ಉಳಿಸುತ್ತೇವೆ, ಸರ್ವಾಧಿಕಾರ ಸಲ್ಲ ಎಂದು ಘೋಷಣೆಗಳಿಂದ ಹೇಳುವ ಕೆಲ ರಾಜಕೀಯ ಪಕ್ಷಗಳು ತಮ್ಮ ನಡವಳಿಕೆಯಿಂದಲೂ ಸಂವಿಧಾನಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ತಮ್ಮ ಬದ್ಧತೆಯನ್ನು ನಿರೂಪಿಸಬೇಕಿದೆ. ಇಲ್ಲದಿದ್ದರೆ ಭಾರತೀಯ ಪ್ರಜೆಯೇ ಪ್ರಜಾಪ್ರಭುತ್ವವನ್ನು ತನ್ನ ಪ್ರಾಣಕೊಟ್ಟಾದರೂ ಉಳಿಸಿಕೊಳ್ಳುತ್ತಾನೆ ಎನ್ನುವುದಕ್ಕೆ ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟವೇ ಸಾಕ್ಷಿ. ■

## ಸಂಸ್ಮರಣೆ

# ಮಧುಕರ ದತ್ತಾತ್ರೇಯ ದೇವರಸ್
### (11 ಡಿಸೆಂಬರ್ 1915 – 17 ಜೂನ್ 1996)



ಸೇವೆಯೇ ಸರ್ವೋಚ್ಚ ಜೀವನ ಧರ್ಮ, ರಾಷ್ಟ್ರಸೇವೆಗಿಂತ ದೊಡ್ಡ ಕಾರ್ಯವಿಲ್ಲ. ತನಗೆ ರಾಷ್ಟ್ರವೇ ಮೊದಲು, ರಾಷ್ಟ್ರವೇ ಕೊನೆ ಎನ್ನುತ್ತಾ ಸಂಪೂರ್ಣ ಬದುಕನ್ನು ರಾಷ್ಟ್ರದ ಹಿತಕ್ಕಾಗಿ ಸವೆಸಿದ ವ್ಯಕ್ತಿ ಮಧುಕರ ದತ್ತಾತ್ರೇಯ ದೇವರಸ್. ಮಧುಕರ ದತ್ತಾತ್ರೇಯ ದೇವರಸ್ ಅವರು 11 ಡಿಸೆಂಬರ್ 1915ರಲ್ಲಿ ದತ್ತಾತ್ರೇಯ ಕೃಷ್ಣರಾವ್ ದೇವರಸ್ ಹಾಗೂ ಪಾರ್ವತಿ ಬಾಯಿಯ ಮಗನಾಗಿ ಜನಿಸಿದರು. ತಮ್ಮ ಪ್ರೌಢ ಶಿಕ್ಷಣವನ್ನು ನ್ಯೂ ಇಂಗ್ಲೀಷ್ ಹೈಸ್ಕೂಲಿನಲ್ಲಿ, ಮೆಟ್ರಿಕ್ಯುಲೇಶನ್ ಶಿಕ್ಷಣವನ್ನು ಬೇರರ್ ಬೋರ್ಡ್ ಸೆಕೆಂಡರಿ ಎಜುಕೇಶನ್ ಆಫ್ ಸೆಂಟ್ರಲ್ ಪ್ರೋವಿನ್ಸ್ ಇಲ್ಲಿ ಪೂರೈಸಿದರು. ನಂತರ 1935ರಲ್ಲಿ ಮೋರಿಸ್ ಕಾಲೇಜಿನಲ್ಲಿ ಪದವಿ ಪೂರೈಸಿ ಕಾನೂನು ಶಿಕ್ಷಣವನ್ನು ನಾಗಪುರ ವಿಶ್ವವಿದ್ಯಾನಿಲಯದ ಕಾನೂನು ವಿದ್ಯಾಲಯದಿಂದ ಪಡೆದರು. ಇವರು ನಾಗಪುರದಲ್ಲಿ ನೆಲೆಸಿದ್ದರಿಂದ ಬಾಲ್ಯದಿಂದಲೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಅಪಾರ ಗೌರವ. ಡಾ. ಕೇಶವ ಬಲಿರಾಮ್ ಹೆಡಗೇವಾರರ ಜೀವನದಿಂದ ಪ್ರೇರಣೆ ಪಡೆದು ತಾವು ತಮ್ಮ ಸಂಪೂರ್ಣ ಜೀವನವನ್ನು ಸಂಘಕ್ಕೆ ಅರ್ಪಿಸಬೇಕೆಂದು ನಿರ್ಧರಿಸಿದರು. ಅದಾಗಲೇ ಇವರ ಸಹೋದರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ತೊಡಗಿಸಿಕೊಂಡಿದ್ದರು. ಈ ಎಲ್ಲಾ ವಾತಾವರಣದಿಂದ ಕಾನೂನು ಪದವಿ ಪಡೆದಿದ್ದರೂ ವೃತ್ತಿ ಜೀವನದತ್ತ ಮುಖ ಮಾಡದೆ, ದಾಂಪತ್ಯ ಜೀವನವನ್ನೂ ತ್ಯಜಿಸಿ ತಮ್ಮನ್ನು ತಾವು ಸಂಪೂರ್ಣವಾಗಿ ರಾಷ್ಟ್ರಕ್ಕೆ ಮೀಸಲಿಡಲು ನಿರ್ಧರಿಸಿದರು.

ಮೊದಲಿಗೆ ಬಂಗಾಲದಲ್ಲಿ ಪ್ರಚಾರಕರಾಗಿ ಸಂಘಕಾರ್ಯ ಆರಂಭಿಸಿದ ಇವರು 1946ರಲ್ಲಿ ಸಹಸರಕಾರ್ಯವಾಹರಾಗಿ, 1965ರಲ್ಲಿ ಸರಕಾರ್ಯವಾಹರಾಗಿ ಜವಾಬ್ದಾರಿಯನ್ನು ನಿಭಾಯಿಸಿದರು. ಮುಂದೆ 5 ಜೂನ್ 1973ರಂದು ಜಗತ್ತಿನ ಅತಿ ದೊಡ್ಡ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂರನೇ ಸರಸಂಘಚಾಲಕರಾಗಿ ಜವಾಬ್ದಾರಿ ಪಡೆದರು.


**ದೇಶದ ಕರಾಳ ಕಾಲಘಟ್ಟದಲ್ಲಿ ಸಂಘದ ನೇತೃತ್ವ:** ಬಾಳಾಸಾಹೇಬ್ ದೇವರಸ್ ಸಂಘದ ನೇತೃತ್ವ ವಹಿಸಿದ ಕಾಲಘಟ್ಟದಲ್ಲಿ ಈ ರಾಷ್ಟ್ರ ಕರಾಳ ದಿನಗಳನ್ನು ಎದುರಿಸಿತು. ಭಾರತದ ಆಗಿನ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದರು. ಅದೆಷ್ಟೋ ದೇಶಭಕ್ತರ ಬಂಧನವೂ ಆಯಿತು. ಸಂಘದ ಮೇಲಂತೂ ನಿಷೇಧಾಜ್ಞೆ ಹೇರಲಾಯಿತು. ಬಾಳ ಸಾಹೇಬರನ್ನು ಸೇರಿದಂತೆ, ಸಂಘದ ಅಸಂಖ್ಯ ಸ್ವಯಂಸೇವಕರ ಬಂಧನವಾಯಿತು. ಎರಡು ವರ್ಷಗಳ ಕಾಲ ಇದನ್ನು ಸಮರ್ಥವಾಗಿ ಎದುರಿಸಿ ನಿಷೇಧಾಜ್ಞೆಯ ಸಮಯದಲ್ಲೂ ಸಂಘ ಸಕ್ರಿಯವಾಗಿ ಮುಂದುವರೆಯುವಂತೆ ಮಾಡಿದವರು ಬಾಳಾಸಾಹೇಬರು.

ಸಂಘವಿನ್ನು ಮತ್ತೆ ಉಚ್ಛ್ರಾಯ ಸ್ಥಿತಿಯನ್ನೇರಲು ಸಾಧ್ಯವಿಲ್ಲ ಎಂದು ಅನೇಕರು ಹೇಳುತ್ತಿದ್ದಾಗ ಅವುಗಳಿಗೆ ಕಿಗೊಡದೆ ಸಂಘವನ್ನು ಮತ್ತೆ ಭದ್ರಗೊಳಿಸಿದರು. ಹಿಂದೂ ಸಮಾಜದ ಬಗ್ಗೆ ಅಪಾರ ಕನಸನ್ನು ಹೊಂದಿದ್ದ ಇವರು ಹಿಂದೂ ಸಮಾಜದಲ್ಲಿ ಕಾಲಾಂತರದಲ್ಲಿ ಬೆಳೆದು ಬಂದ ಅನಿಷ್ಟ ಪದ್ಧತಿಗಳನ್ನು ಘಂಟಾಘೋಷವಾಗಿ ವಿರೋಧಿಸುತ್ತಿದ್ದರು. ಅಸ್ಪೃಶ್ಯರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಇವರು 'ಅಸ್ಪೃಶ್ಯತೆ ತಪ್ಪಲ್ಲದಿದ್ದರೇ, ಮತ್ಯಾವುದೂ ತಪ್ಪಲ್ಲ' ಎಂದು ಹೇಳಿದ್ದರು. ಹಿಂದೂ ಪುರಾಣ, ವೇದಗಳು, ತತ್ವಾದರ್ಶಗಳ ಬಗ್ಗೆ ಅಪಾರಜ್ಞಾನ ಹೊಂದಿದ್ದ ಇವರು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹಲವು ಪುಸ್ತಕಗಳನ್ನು ಬರೆದರು. ಪಂಜಾಬ್ ಪ್ರಾಬ್ಲಮ್ ಅಂಡ್ ಇಟ್ಸ್ ಸಲ್ಯೂಷನ್, ಸೋಶಿಯಲ್ ಈಕ್ವಾಲಿಟಿ, ಹಿಂದೂ ಕನ್ಸೋಲೋಡೇಷನ್, ಹಿಂದೂ ಸಂಘಟನ್ ಔರ್ ಸತ್ತಾವಾದಿ ರಾಜನೀತಿ ಇದು ಇವರು ಬರೆದ ಕೆಲವು ಪುಸ್ತಕಗಳು.

1994ರವರೆಗೆ ಸಂಘದ ಸರಸಂಘಚಾಲಕರಾಗಿ ನೇತೃತ್ವ ವಹಿಸಿ ನಂತರ ಅನಾರೋಗ್ಯ ಕಾರಣದಿಂದಾಗಿ ಜವಾಬ್ದಾರಿಯನ್ನು ತ್ಯಜಿಸಿದರು. ತೀವ್ರ ಆರೋಗ್ಯ ಸಮಸ್ಯೆಯಿಂದಾಗಿ 17 ಜೂನ್ 1996ರಲ್ಲಿ ಇವರ ದೇಹಂತ್ಯವಾಯಿತು. ದೇಶ ಸೇವೆಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಬಾಳ ಸಾಹೇಬರ ಜೀವನ ಇಂದಿನ ಯುವಕರಿಗೆ ನಿಜಕ್ಕೂ ಆದರ್ಶ.

## ಎಲ್ಲೋ ಕೇಳಿದ ಕಥೆ

### ವಿತಂಡವಾದಿ



ಒಮ್ಮೆ ವಿತಂಡವಾದಿಯೊಬ್ಬ ಗುರುವಿನ ಬಳಿಗೆ ಬಂದು ವಿಷಯವೊಂದರ ಬಗ್ಗೆ ಅನಾವಶ್ಯಕ ವಾದಕ್ಕಿಳಿದ. ಗುರು ಸಾವಧಾನಚಿತ್ತದಿಂದ ಎಷ್ಟೇ ಸರಳವಾಗಿ ಬಿಡಿಸಿ ಹೇಳುತ್ತಿದ್ದರೂ ಅವನು ಒಪ್ಪದೆ ಮೇಲಿಂದ ಮೇಲೆ ಪ್ರಶ್ನೆಗಳನ್ನು ಕೇಳಿ ವಿತಂಡವಾಗಿ ವಾದ ಮಾಡುತ್ತಿದ್ದ.

ಅವನಿಗೆ ಬುದ್ಧಿ ಕಲಿಸಬೇಕೆಂದು ನಿರ್ಧರಿಸಿದ ಗುರುಗಳು ಒಳಗೆ ಹೋಗಿ ಚಹಾ ಸಿದ್ಧಪಡಿಸಿ ತಂದು ಅವನ ಮುಂದೆ ಒಂದು ಖಾಲಿ ಲೋಟವನ್ನಿಟ್ಟು ಅದರೊಳಗೆ ಚಹಾ ಸುರಿಯಲಾರಂಭಿಸಿದರು. ಲೋಟ ತುಂಬಿ ಚಹಾ ಹೊರಗೆ ಚೆಲ್ಲುತ್ತಿದ್ದರೂ ಗುರುಗಳು ಮಾತ್ರ ಚಹಾವನ್ನು ಲೋಟಕ್ಕೆ ಸುರಿಯುತ್ತಲೇ ಇದ್ದರು. ಗಲಿಬಿಲಿಗೊಂಡ ವಿತಂಡವಾದಿ "ಇದೇನು ಗುರುಗಳೇ ಲೋಟ ತುಂಬಿದ್ದರೂ ಸುರಿಯುತ್ತಲೇ ಇದ್ದೀರಲ್ಲಾ?" ಎಂದು ಪ್ರಶ್ನಿಸಿದ. ಆಗ ಗುರು "ಅದರಲ್ಲೇನು ತಪ್ಪಿದೆ?" ಎಂದು ಮರುಪ್ರಶ್ನಿಸಿದರು.

ಅದಕ್ಕೆ ವಿತಂಡವಾದಿಯು "ತುಂಬಿರುವ ಲೋಟ ಖಾಲಿಮಾಡದ ಹೊರತು ಚಹಾ ಹೇಗೆ ಪುನಃ ಲೋಟದೊಳಗೆ ಹೋದೀತು" ಎಂದು ಕೇಳಿದ. ಅದಕ್ಕೆ ಗುರು "ನೀನೂ ಅಷ್ಟೇ. ಈ ಚಹಾ ಲೋಟದಂತೆಯೇ ಆಗಿದ್ದೀಯಾ. ನಿನ್ನದೇ ಅಭಿಪ್ರಾಯ, ಆಲೋಚನೆಗಳಿಂದ ತುಂಬಿ ಹೋಗಿದ್ದೀಯಾ. ಹಾಗಾಗಿ ನಾನು ಹೇಳುವುದು ನಿನ್ನ ತಲೆಯೊಳಗೆ ಇಳಿಯುತ್ತಿಲ್ಲ. ಮೊದಲು ಬೇಡವಾದದ್ದನ್ನೆಲ್ಲಾ ಹೊರಹಾಕು. ನಂತರ ನಾನು ಹೇಳುವ ಮಾತು ನಿನ್ನ ತಲೆಯ ಒಳಗೆ ಹೋಗುತ್ತದೆ" ಎಂದು ಬುದ್ಧಿ ಹೇಳಿದರು.

# ದುಶ್ಚಟಗಳಿಂದ ತುಂಬಿದ್ದ ಕಪಾಡಿಯಾ ಸೇವಾಬಸ್ತಿಯನ್ನು ಸಂಸ್ಕಾರ ಕಲಿಸಿ ಕಾಪಾಡಿದ ಸೇವಾಭಾರತಿ

ಉತ್ತರ ಪ್ರದೇಶದಲ್ಲಿ ಕಾನ್ಪುರ ನಗರದ ಕಪಾಡಿಯಾವನ್ನು ಸಾಮಾನ್ಯವಾಗಿ ಎಲ್ಲರೂ ಭಿಕ್ಷೆ ಬೇಡುವವರ ಸೇವಾಬಸ್ತಿ ಎಂಬ ಹೆಸರಿನಲ್ಲೇ ಗುರುತಿಸುತ್ತಿದ್ದರು. ಸೇವಾಬಸ್ತಿಯ ಇಡೀ ಪರಿವಾರದ ಕಸುಬೇ ಭಿಕ್ಷೆ ಬೇಡುವುದಾಗಿಬಿಟ್ಟಿತ್ತು. ಆದರೆ ಕೆಲವು ವರ್ಷಗಳ ಹಿಂದೆ ಕಾನ್ಪುರದಲ್ಲಿ ಸೇವಾಭಾರತಿ ಮಾತೃಮಂಡಲಿಯ ಮೂಲಕ ಆರಂಭವಾದ ಬಾಲಸಂಸ್ಕಾರ, ಹೊಲಿಗೆ ಮತ್ತು ಸಾಕ್ಷರತಾ ಕೇಂದ್ರಗಳು ಸೇವಾಬಸ್ತಿ ನಿವಾಸಿಗಳಿಗೆ ಶಿಕ್ಷಣ ಮತ್ತು ಆತ್ಮನಿರ್ಭರತೆಯ ಪಾಠವನ್ನು ಕಲಿಸಿದವು. ಇಂದು ಈ ಪರಿವಾರಗಳ 52 ಮಕ್ಕಳು ಗುರುಕುಲ ಪಬ್ಲಿಕ್ ಶಾಲೆಯಲ್ಲಿ ಓದುತ್ತಿದ್ದಾರೆ. ಅವರ ಈ ಶಿಕ್ಷಣದ ಪೂರ್ತಿ ಖರ್ಚನ್ನು ವಿವೇಕಾನಂದ ಸಮಿತಿಯು ಭರಿಸುತ್ತಿದೆ. ಈ ಮಕ್ಕಳೆಲ್ಲಾ ಭಿಕ್ಷೆ ಬೇಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಾರೆ ಎಂದು ಸಮಿತಿಯ ಸಂಯೋಜಕರೂ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರೂ ಆದ ವಿಜಯ ದೀಕ್ಷಿತ್ ಅವರು ಹೇಳುತ್ತಾರೆ.

ಕಾನ್ಪುರದಲ್ಲಿ ಪನಕೀ ಎನ್ನುವ ಹೆಸರು ಬಂದ ಕೂಡಲೇ ಸಂಕಟಮೋಚನ ಹನುಮಾನ ಮಂದಿರದ ದೃಶ್ಯ ಸ್ವತಃ ಕಣ್ಣುಗಳ ಮುಂದೆ ಬಂದುಬಿಡುತ್ತದೆ. ಇದು ಪನಕೀ ಬಾಬಾನಗರ ಎಂದೇ ಕರೆಯಲ್ಪಡುತ್ತದೆ. ಇಲ್ಲಿ ಪನಕೀ ಧಾಮದ ಸ್ವಲ್ಪವೇ ದೂರದಲ್ಲಿ ಗಂಗಾಗಂಜ್‌ನಲ್ಲಿ ಸುಮಾರು ನೂರು ಪರಿವಾರಗಳ ಒಂದು ವಸತಿ ಸಂಕೀರ್ಣವಿದೆ. ಅದೇ ಕಪಾಡಿಯಾ ಸೇವಾಬಸ್ತಿ. ಭಿಕ್ಷಾವೃತ್ತಿಯಲ್ಲಿ ನಿರತರಾಗಿದ್ದ ಇಲ್ಲಿನ ಜನ ಸಂಪೂರ್ಣವಾಗಿ ವಿವಿಧ ದುಶ್ಚಟಗಳ ದಾಸರಾಗಿದ್ದರು.

ಸೇವಾಭಾರತಿಯ ಪರಿಶ್ರಮದಿಂದ ಇಲ್ಲಿ ಬಾಲಸಂಸ್ಕಾರ ಕೇಂದ್ರದ ಆರಂಭವಾಗಿರದಿದ್ದರೆ ಬಹುಶಃ ಇವರ ಮುಂದಿನ ಪೀಳಿಗೆಯೂ ಇದೇ ಹಾದಿಯಲ್ಲಿ ಸಾಗುತ್ತಿತ್ತೇನೋ? ಸೇವಾಬಸ್ತಿಗಳ ಯಾವ ಸಹೋದರಿಯರ ಕುಟುಂಬಗಳಿಂದ ಮಕ್ಕಳನ್ನು ಕೇಂದ್ರಕ್ಕೆ ಕಳಿಸುವ ವ್ಯವಸ್ಥೆ ಮಾಡಲಾಗಿತ್ತೋ, ಆ ಸಹೋದರಿಯರ ಬೇಡಿಕೆಯ ಮೇರೆಗೆ ಅಲ್ಲಿ ಎರಡೇ ತಿಂಗಳಲ್ಲಿ ಹೊಲಿಗೆ ಮತ್ತು ಸಾಕ್ಷರತಾ ಕೇಂದ್ರಗಳೂ ಆರಂಭಗೊಂಡವು. ಸೇವಾಬಸ್ತಿಯ ಕೆಲವು ಮಹಿಳೆಯರ ಸಹಾಯದಿಂದ ಕೆಲವೇ ತಿಂಗಳಲ್ಲಿ ಅಲ್ಲಿನ ಮಕ್ಕಳು ಹಿಂದಿಯನ್ನು ಓದುವುದು, ಹಸ್ತಾಕ್ಷರ ಹಾಕುವುದು ಮತ್ತು ಸಾಮಾನ್ಯ ಗಣಿತವನ್ನೂ ಕಲಿತಿದ್ದಾರೆ.

ಈ ಕಾರ್ಯ ಅಷ್ಟು ಸುಲಭವಾಗಿರಲಿಲ್ಲ. ಪ್ರಾರಂಭದಲ್ಲಿ ಸೇವಾಬಸ್ತಿಯ ಜನರು ಮಾತೃಮಂಡಲಿಯ ಸೋದರಿಯರನ್ನು ಸಂಶಯದ ದೃಷ್ಟಿಯಿಂದ ನೋಡುತ್ತ ಮುಖ ಸಿಂಡರಿಸುತ್ತಿದ್ದರು. ಅವರೊಂದಿಗೆ ಮಾತನಾಡಲೂ ಇಷ್ಟ ಪಡುತ್ತಿರಲಿಲ್ಲ. ಆದರೆ ನಿರಂತರ ಪರಿಶ್ರಮದಿಂದ ಕೊನೆಗೂ 2016ರ ಅಕ್ಟೋಬರ್ 22ರಂದು ಮೊದಲ ಕೇಂದ್ರ ಆರಂಭವಾಯಿತು. ಇದರ ಪರಿಣಾಮ ಅಲ್ಲಿನ ಮಕ್ಕಳು ದುಶ್ಚಟಗಳನ್ನು ಬಿಟ್ಟು, ಸ್ವಚ್ಛತೆಯನ್ನು ರೂಢಿಸಿಕೊಂಡರು. ನಂತರ ಭಿಕ್ಷೆ ಬೇಡುವುದನ್ನು ಬಿಟ್ಟರು. ಈ ಪರಿವರ್ತನೆಯಿಂದ ವಿಸ್ಮಿತರಾದ ಸೇವಾಬಸ್ತಿಯ ಮಹಿಳೆಯರು ಸೇವಾಭಾರತಿಯ ಸದಸ್ಯರಲ್ಲಿ ತಮಗೂ ಓದನ್ನು ಕಲಿಸಬೇಕೆಂದು ಆಗ್ರಹಿಸಿದರು. ಹೀಗೆ ಪ್ರಾರಂಭವಾದ ಪ್ರೌಢಶಿಕ್ಷಣ ಕೇಂದ್ರ ಮತ್ತು ಹೊಲಿಗೆ ಕೇಂದ್ರಗಳು ಕಪಾಡಿಯಾ ಸೇವಾಬಸ್ತಿಯ ಜನರ ಜೀವನವನ್ನೇ ಬದಲಾಯಿಸಿದವು. ಕೆಲವು ಪರಿವಾರಗಳು ಭಿಕ್ಷೆ ಬೇಡುವುದನ್ನು ನಿಲ್ಲಿಸಿ ದಿನಗೂಲಿ ಮಾಡುವುದನ್ನು ಪ್ರಾರಂಭಿಸಿದವು. ಹೊಲಿಗೆ ಕಲಿತ ಅನೇಕ ಮಹಿಳೆಯರು ಮನೆ ಅಥವಾ ಅಂಗಡಿಯಲ್ಲಿ ಹೊಲಿಗೆ ಕೆಲಸ ಆರಂಭಿಸಿದ್ದಾರೆ.


ಸೇವಾಬಸ್ತಿಯ ಮಕ್ಕಳು ಓದುವುದರ ಜೊತೆಜೊತೆಗೆ ಓಟ, ಎತ್ತರ ಜಿಗಿತ, ರಿಲೇ ಓಟ ಇತ್ಯಾದಿ ಸ್ಪರ್ಧೆಗಳಲ್ಲಿ ಹಲವಾರು ಪದಕಗಳನ್ನು ಗೆದ್ದಿದ್ದಾರೆ. ಇತ್ತೀಚೆಗೆ ಸಂಪನ್ನಗೊಂಡ ಒಂದು ಕಾರ್ಯಕ್ರಮದಲ್ಲಿ ಇಲ್ಲಿನ ಮಕ್ಕಳು ಪ್ರಸ್ತುತಪಡಿಸಿದ ಸಂಪೂರ್ಣ ವಂದೇಮಾತರಂ ಕಾರ್ಯಕ್ರಮ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತು. ಪ್ರತಿ ವಾರ ನಡೆಯುತ್ತಿರುವ ಭಜನಾಮಂಡಲಿಯು ಮಹಿಳೆಯರನ್ನು ಒಂದು ಧರ್ಮಸೂತ್ರದಲ್ಲಿ ಬೆಸೆದಿದೆ ಮತ್ತು ದಿನನಿತ್ಯದ ಜಗಳದ ಬದಲು ಅವರೆಲ್ಲ ಒಟ್ಟಿಗೆ ಸೇರಿ ಕೆಲಸದ ಕುರಿತು ಚರ್ಚಿಸಲು ಅನುವುಮಾಡಿಕೊಟ್ಟಿದೆ.

ಸಂಪರ್ಕ: ಪ್ರೀತಿ, 9450347173

## ಪುಸ್ತಕ ಪರಿಚಯ

### ಭಾರತದ ಧೀರ ಚೇತನಗಳು

**ಇಂಗ್ಲಿಷ್ ಮೂಲ:** ವಿಕ್ರಂ ಸಂಪತ್
**ಕನ್ನಡ ಭಾಷಾಂತರ:** ಎಲ್. ವಿ. ಶಾಂತಕುಮಾರಿ
**ಪ್ರಕಾಶಕರು:** ಸಾಹಿತ್ಯ ಪ್ರಕಾಶನ
**ಬೆಲೆ:** ರೂ.450




ಆಕ್ರಮಣಕಾರರು ಒಡ್ಡಿದ ವಿರೋಧಗಳಿಗೆ, ಪಂಥಾಹ್ವಾನಗಳಿಗೆ ಎಂದೂ ಬಲಿಯಾಗದಿದ್ದ ಆದರೆ ಇತಿಹಾಸದ ವೃತ್ತಾಂತಗಳಲ್ಲಿ ಕಳೆದುಹೋಗಿ ಮರೆಯಲ್ಪಟ್ಟ ಭಾರತದ ಹದಿನೈದು ಸ್ತ್ರೀ ಪುರುಷ ಚೇತನಗಳ ಕಥನ ಇದಾಗಿದೆ. ಖ್ಯಾತ ಇತಿಹಾಸಕಾರ ವಿಕ್ರಮ್ ಸಂಪತ್ ಅವರ Bravehearts of Bharat ಇದರ ಅನುವಾದಗೊಂಡ ಕೃತಿಯೇ "ಭಾರತದ ಧೀರ ಚೇತನಗಳು". ಕನ್ನಡದ ಹಿರಿಯ ಲೇಖಕಿ – ಅನುವಾದಕಿ ಎಲ್ ವಿ ಶಾಂತಕುಮಾರಿ ಈ ಕೃತಿಯನ್ನು ಕನ್ನಡಕ್ಕೆ ತಂಡಿದ್ದಾರೆ. ವಿಕ್ರಮ್ ಸಂಪತ್ ಅವರು ತುಂಬ ಆಳವಾಗಿಯೂ ವ್ಯಾಪಕವಾಗಿಯೂ ಅಧ್ಯಯನ ಮಾಡಿ ಬರೆದ ಪುಸ್ತಕ 'Bravehearts of Bharat'. ಇತಿಹಾಸಕ್ಕೆ ಸಂಬಂಧಪಟ್ಟ ಸಂಗತಿಯನ್ನೋ ವ್ಯಕ್ತಿಯನ್ನೋ ಕುರಿತು ಅವರು ಸಾಕಷ್ಟು ಆಧಾರಗಳ ಮೂಲಕ ಇಲ್ಲಿ ವಿವರಿಸಿದ್ದಾರೆ. ಸತ್ಯವೇ ಅವರ ಬರಹದ ಜೀವಾಳ. ಶೈಲಿಯೂ ಅಷ್ಟೇ ಮೊನಚಾಗಿರುತ್ತದೆ. ಇತಿಹಾಸವಾದರೂ ಕತೆಕಾದಂಬರಿಯಂತೆ ಓದಿಸಿಕೊಳ್ಳುತ್ತದೆ. ನಮ್ಮ ದೇಶದ ಸ್ವಾತಂತ್ರ್ಯಾನಂತರದ ರಾಜಕಾರಣದ ದುರದ್ದೇಶಗಳಿಂದಾಗಿ ನಮ್ಮ ಸನಾತನ ದೇಶದ ಸಂಸ್ಕೃತಿಯನ್ನು ಹಾಳುಮಾಡಿದವರನ್ನೇ ವೈಭವೀಕರಿಸಲಾಯಿತು. ದೇಶಕ್ಕಾಗಿ ಸಮಾಜಕ್ಕಾಗಿ ಆತ್ಮಗೌರವಕ್ಕಾಗಿ ಅಂತಹ ದಾಳಿಕೋರರೊಂದಿಗೆ ಹೋರಾಡಿದ ನಮ್ಮ ವೀರರನ್ನು ನಮ್ಮ ಮಕ್ಕಳಿಂದಲೂ ಓದುಗರಿಂದಲೂ ದೂರವೇ ಇರಿಸಲಾಯಿತು. ವಿಕ್ರಮ್ ಸಂಪತ್ ಮತ್ತು ಇಂತಹ ಹೊಸ ತಲೆಮಾರಿನ ಸ್ವತಂತ್ರ ಮನೋಭಾವದ ಅಧ್ಯಯನಶೀಲರ ಬರಹಗಳಿಂದಾಗಿ ವಿಸ್ಮೃತಿಗೊಳಗಾಗಿದ್ದ ಅಂತಹ ವೀರರೂ ಸತ್ಯಸಂಗತಿಗಳೂ ನಮ್ಮ ತಿಳಿವಳಿಕೆಗೆ ಎಟುಕುತ್ತಿದೆ.

ಸಂಪರ್ಕ: 6360581957

**ಸಂಪಾದಕೀಯ ಸಹಕಾರ:** ವಿಶ್ವೇಶ್ವರ ಶರ್ಮ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ ಉದ್ಯಾವರ, ಹರಿಪ್ರಸಾದ್ ಈಶ್ವರಮಂಗಲ, ಪಂಚಮಿ ಬಾಕಿಲಪದವು

## 3D ಮುದ್ರಿತ ಎಂಜಿನ್‌ನೊಂದಿಗೆ ವಿಶ್ವದ ಮೊದಲ ರಾಕೆಟ್ ಉಡಾವಣೆ




ಐಐಟಿ ಮದ್ರಾಸ್‌ನ ಸ್ಟಾರ್ಟ್‌ಅಪ್ ಆದ ಅಗ್ನಿಕುಲ್ ಕಾಸ್ಮೊಸ್, ಸಿಂಗಲ್–ಪೀಸ್ ತ್ರೀ–ಡೈಮೆನ್ಷನಲ್ (3D) ಮುದ್ರಿತ ಎಂಜಿನ್‌ನೊಂದಿಗೆ ವಿಶ್ವದ ಮೊದಲ ರಾಕೆಟ್ ಉಡಾವಣೆ ಮಾಡಿದೆ. ರಾಕೆಟ್ ಅಗ್ನಿಬಾನ್ ಖಔಡಿಖಿಜಆ (ಸಬ್ ಆರ್ಬಿಟಲ್ ಟೆಕ್ನಾಲಜಿಕಲ್ ಡೆಮಾನ್‌ಸ್ಟ್ರೇಟರ್) ಭಾರತದ ಮೊದಲ ಅರೆ–ಕ್ರಯೋಜೆನಿಕ್ ಎಂಜಿನ್‌ಚಾಲಿತ ರಾಕೆಟ್ ಉಡಾವಣೆಯಾಗಿದೆ.  ಇದನ್ನು ಸಂಪೂರ್ಣವಾಗಿ ದೇಶೀಯವಾಗಿ ವಿನ್ಯಾಸಗೊಳಿಸಲಾಗಿದೆ ಮತ್ತು ಸ್ಥಳೀಯವಾಗಿ ತಯಾರಿಸಲಾಗುತ್ತದೆ. ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿ ಅಗ್ನಿಕುಲ್ ಸ್ಥಾಪಿಸಿದ 'ಧನುಷ್' ಎಂಬ ಭಾರತದ ಮೊದಲ ಖಾಸಗಿಯಾಗಿ ಅಭಿವೃದ್ಧಿಪಡಿಸಿದ ಲಾಂಚ್‌ಪ್ಯಾಡ್‌ನಿಂದ ಇದನ್ನು ಉಡಾಯಿಸಲಾಯಿತು.

## ಒಬಿಸಿ ಪ್ರಮಾಣಪತ್ರ ರದ್ದುಗೊಳಿಸಿದ ಹೈಕೋರ್ಟ್



2010ರಿಂದ ಪಶ್ಚಿಮ ಬಂಗಾಳದಲ್ಲಿ ನೀಡಲಾದ ಎಲ್ಲಾ ಇತರ ಹಿಂದುಳಿದ ವರ್ಗಗಳ (OBC) ಪ್ರಮಾಣಪತ್ರಗಳನ್ನು ಕೊಲ್ಕತ್ತಾ ಹೈಕೋರ್ಟ್ ರದ್ದುಗೊಳಿಸಿದೆ. OBC ಪ್ರಮಾಣಪತ್ರಗಳನ್ನು ನೀಡುವ ಪ್ರಕ್ರಿಯೆಯನ್ನು ಪ್ರಶ್ನಿಸಿ ಸಲ್ಲಿಸಲಾದ ಪಿಐಎಲ್ ಮೇಲೆ ತೀರ್ಪು ನೀಡಿದ ನ್ಯಾಯಮೂರ್ತಿ ತಪಬ್ರತ ಚಕ್ರವರ್ತಿ ಮತ್ತು ರಾಜಶೇಖರ್ ಮಂಥ ಅವರ ವಿಭಾಗೀಯ ಪೀಠವು, ಎಲ್ಲಾ ಒಬಿಸಿ ಪ್ರಮಾಣಪತ್ರಗಳ ರದ್ಧತಿಯ ತೀರ್ಪು ಪ್ರಕಟಿಸಿತು. ಹೈಕೋರ್ಟ್ ಪೀಠವು 2010ರ ನಂತರ ಸಿದ್ಧಪಡಿಸಲಾದ ಒಬಿಸಿ ಪಟ್ಟಿಯನ್ನು ಕಾನೂನುಬಾಹಿರ ಎಂದು ಹೇಳಿದೆ.

## 30ನೇ ಬಾರಿ ಮೌಂಟ್ ಎವರೆಸ್ಟ್ ಏರಿದ ರೀಟಾ ಶೆರ್ಪಾ

ಮೌಂಟ್ ಎವರೆಸ್ಟ್ ಏರಿ ನೇಪಾಳಿ ಪರ್ವತಾರೋಹಿ ಮತ್ತು ಮಾರ್ಗದರ್ಶಕ ಕಾಮಿ ರೀಟಾ ಶೆರ್ಪಾ ಸಾಧನೆ ಮಾಡಿದ್ದಾರೆ. ಈ ಮೂಲಕ 30ನೇ ಬಾರಿ ಶಿಖರವನ್ನು ಏರಿದ ವಿಶ್ವದಾಖಲೆ ನಿರ್ಮಿಸಿದ್ದಾರೆ. ಒಬ್ಬ ವ್ಯಕ್ತಿ ಇಷ್ಟೊಂದು ಬಾರಿ ಮೌಂಟ್

# ಸಾಲುದ್ದದ ಸುದ್ದಿಗಳು



ಎವರೆಸ್ಟ್ ಹತ್ತಿರುವುದು ದಾಖಲೆಯಾಗಿದೆ. ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳ ಪ್ರಕಾರ, ಮೌಂಟ್ ಎವರೆಸ್ಟ್ ಸೇರಿದಂತೆ ನೇಪಾಳದ ಎತ್ತರದ ಹಿಮಾಲಯದಲ್ಲಿ ಪರ್ವತಾರೋಹಣ ಮೇಲ್ವಿಚಾರಣೆ ಮಾಡುತ್ತಾರೆ.

## ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕ: 39ನೇ ಸ್ಥಾನಕ್ಕೆ ಭಾರತ



2024ರಲ್ಲಿ ಭಾರತವು ಪ್ರಯಾಣ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕ 39ನೇ ಸ್ಥಾನಕ್ಕೆ ಏರಿದೆ. ಆದರೆ ಯುಎಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಕಡಿಮೆ ಮಧ್ಯಮ–ಆದಾಯದ ಆರ್ಥಿಕತೆಗಳಲ್ಲಿ ಭಾರತವು ದಕ್ಷಿಣ ಏಷ್ಯಾದಲ್ಲಿ ಅತ್ಯುನ್ನತ ಸ್ಥಾನದಲ್ಲಿದೆ. ಈ ಹಿಂದೆ, 2021 ಪ್ರಕಟಿತ ಸೂಚ್ಯಂಕದಲ್ಲಿ ಭಾರತವು 54ನೇ ಸ್ಥಾನದಲ್ಲಿತ್ತು. ಸೂಚ್ಯಂಕ ಸ್ಕೋರ್‌ನಲ್ಲಿ, 1 ಕಳಪೆ ಸಂಖ್ಯೆಯಾಗಿದೆ ಮತ್ತು 7 ಅತ್ಯುತ್ತಮವಾಗಿದೆ. ಭಾರತ 4.25 ಅಂಕಗಳನ್ನು ಗಳಿಸಿದೆ.

## ಮೂರು ದಶಕದ ಬಳಿಕ ಸ್ವದೇಶಕ್ಕೆ ಸ್ವರ್ಣರಾಶಿ

ಇಂಗ್ಲೆಂಡ್‌ನಲ್ಲಿ ಸಂಗ್ರಹವಾಗಿದ್ದ ಬರೋಬ್ಬರಿ 100 ಟನ್ (1 ಲಕ್ಷ ಕೆಜಿ) ಚಿನ್ನವನ್ನು 33 ವರ್ಷಗಳ ಬಳಿಕ ದೇಶಕ್ಕೆ ವಾಪಸ್ ತರುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ದೇಶೀಯ ಖಜಾನೆಯ ಮೌಲ್ಯ ಹೆಚ್ಚಿಸುವುದರೊಂದಿಗೆ ಭಾರತ ಮಹತ್ತರ ಆರ್ಥಿಕ ಬೆಳವಣಿಗೆ ಸಾಧಿಸಿದೆ. ಆರ್ಥಿಕ ಬಿಕ್ಕಟ್ಟು ಪರಿಸ್ಥಿತಿ ನಿಭಾಯಿಸಲು ಭಾರತ 1991ರಲ್ಲಿ ವಿದೇಶಿ ಬ್ಯಾಂಕ್‌ಗಳಲ್ಲಿ



1 ಲಕ್ಷ ಕೆಜಿಯಷ್ಟು ಚಿನ್ನವನ್ನು ಅಡಮಾನವಾಗಿರಿಸಿತ್ತು. ಆದರೀಗ ಭಾರತದ ಆರ್ಥಿಕತೆ ಉತ್ತಮ ಪರಿಸ್ಥಿತಿಯಲ್ಲಿದ್ದು, ಇಂಗ್ಲೆಂಡ್ ಬ್ಯಾಂಕ್‌ನಲ್ಲಿದ್ದ ಇಷ್ಟು ದೊಡ್ಡ ಪ್ರಮಾಣದ ಚಿನ್ನವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮರಳಿ ತಂದಿದ್ದು, ಇದರಿಂದ 2024ರ ಆರ್ಥಿಕ ವರ್ಷದಲ್ಲಿ ದೇಶೀಯ ಖಜಾನೆ ಮೌಲ್ಯ ಹೆಚ್ಚಳವಾಗಿದೆ.

## ಟೆಲಿ ಮಾನಸ್ ಸೆಲ್ ಸ್ಥಾಪಿಸಲು ಆರೋಗ್ಯ ಇಲಾಖೆಯೊಂದಿಗೆ ಎಂಒಯು ಮಾಡಿಕೊಂಡ ರಕ್ಷಣಾ ಸಚಿವಾಲಯ




ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ರಕ್ಷಣಾ ಸಚಿವಾಲಯವು ಸಶಸ್ತ್ರ ಪಡೆಗಳಿಗೆ ಮೀಸಲಾದ ಟೆಲಿ ಮಾನಸ್ ಸೆಲ್ ಸ್ಥಾಪಿಸಲು ಎಂಒಯುಗೆ ಸಹಿ ಹಾಕಿದೆ. ದೇಶದಾದ್ಯಂತ ಎಲ್ಲಾ ಸಶಸ್ತ್ರ ಪಡೆಗಳ ಫಲಾನುಭವಿಗಳಿಗೆ ಮೀಸಲಾದ ಮಾನಸಿಕ ಆರೋಗ್ಯ ಸಹಾಯ ಸಹಾಯವಾಣಿಯಾಗಿ ಸೇವೆ ಸಲ್ಲಿಸಲು ವಿಶೇಷ ಟೆಲಿ ಮಾನಸ್ ಸೆಲ್ ಸ್ಥಾಪಿಸಲಾಗುತ್ತದೆ. 2022ರ ಅಕ್ಟೋಬರ್‌ನಲ್ಲಿ ಪ್ರಾರಂಭವಾದಾಗಿನಿಂದ 10 ಲಕ್ಷಕ್ಕೂ ಹೆಚ್ಚು ಕರೆಗಳನ್ನು ಟೆಲಿ ಮಾನಸ್ ಸ್ವೀಕರಿಸಿದೆ, ದಿನಕ್ಕೆ ಸರಾಸರಿ 3,500 ಕರೆಗಳನ್ನು ಸ್ವೀಕರಿಸಲಾಗುತ್ತಿದೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಒಟ್ಟು 51 ಟೆಲಿ ಮಾನಸ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ.  ಸೂಕ್ತ ಸಲಹೆಗಳನ್ನು ನೀಡುತ್ತಿದೆ. ದೇಶದೆಲ್ಲೆಡೆ ಮಾನಸಿಕ ಆರೋಗ್ಯ ಸೇವೆ ನೀಡಲು 14416 ಅಥವಾ 1–800–891–4416 ಎಂಬ ಟೋಲ್‌ಫ್ರೀ ಸಂಖ್ಯೆ ನೀಡಲಾಗಿದೆ. ಬಹುಭಾಷೆಯ ಸೌಲಭ್ಯ ಇದರಲ್ಲಿದೆ.

# ಆಸಕ್ತಿಕರ ಹವ್ಯಾಸವನ್ನು ಉತ್ಸಾಹದಿಂದ ಮಾಡುವ ಮೂಲಕ ಉತ್ತಮ ಆದಾಯಗಳಿಸುತ್ತಿರುವ ಇಂಜಿನಿಯರ್

ಪ್ರೇರಣಾ

ಒಡಿಶಾ ನಿವಾಸಿ ಸುಬ್ರತ್‌ನಾಥ್ ತಮ್ಮ ಮನೆಯನ್ನು ಅಪರೂಪದ ಹೂವುಗಳು ಮತ್ತು ಹಣ್ಣಿನ ಗಿಡಗಳನ್ನು ಹೊಂದಿರುವ ಮಿನಿ ಗಾರ್ಡನ್ ಆಗಿ ಪರಿವರ್ತಿಸಿದ್ದಾರೆ. ಅವರ ಸಂಗ್ರಹಣೆಯಲ್ಲಿ ಪ್ರತಿ ಕೆಜಿಗೆ 2.5 ಲಕ್ಷ ವರಮಾನವನ್ನು ತರುವ ಮಿಯಾಝಾಕಿ ಮಾವು ಕೂಡ ಇದೆ. ಇವುಗಳ ಜೊತೆಗೆ ಅವರ ತೋಟದಲ್ಲಿ ನೈದಿಲೆಗಳು, ಕಮಲಗಳು ಮತ್ತು ಇತರ ಅಪರೂಪದ ಹೂವುಗಳನ್ನು ಬೆಳೆಯುತ್ತಿದ್ದಾರೆ. ಸುಬ್ರತ್ ಅವರ ಈ ಕಾರ್ಯವು ಇತರರಿಗೆ ತೋಟಗಾರಿಕೆಯತ್ತ ಆಸಕ್ತಿ ಬೆಳೆಯಲು ಪ್ರೇರೇಪಿಸುತ್ತದೆ.

ಸುಬ್ರತ್‌ನಾಥ್ ಅವರಿಗೆ ಶಾಪಿಂಗ್‌ಗಾಗಿ ಪೇಟೆಗಳಿಗೆ ಹೋಗುವುದಕ್ಕಿಂತ ನರ್ಸರಿಗಳಿಗೆ ಭೇಟಿ ನೀಡುವುದು ಹೆಚ್ಚು ಖುಷಿಯನ್ನು ನೀಡುತ್ತದೆ. ಅದು ಅವರಿಗೆ ಅತ್ಯಂತ ಲವಲವಿಕೆಯ ಚಟುವಟಿಕೆಗಳಲ್ಲಿ ಒಂದಾಗಿದೆ ಎಂದು ಅವರು ಹೇಳುತ್ತಾರೆ. ತಮ್ಮ ತೋಟದ ಮಾವಿನ ಗಿಡಗಳ ಬಗ್ಗೆ ಮಾತನಾಡುತ್ತಾ, ಅಪರೂಪದ ಮಾವು ಜಪಾನ್‌ನ ಮಿಯಾಝಾಕಿ ನಗರದಲ್ಲಿದೆ. ಇದು ನೇರಳೆ–ಕೆಂಪು ಬಣ್ಣವನ್ನು ಹೊಂದಿದೆ ಮತ್ತು ಇತರೆ ಹಣ್ಣುಗಳಿಗಿಂತ ಸಿಹಿಯಾಗಿರುತ್ತದೆ, ರಸಭರಿತವಾಗಿದೆ ಮತ್ತು ಪ್ರಸಿದ್ಧ ಅಲ್ಫೋನ್ಸೊ ಮಾವಿನಹಣ್ಣುಗಳನ್ನು ಒಳಗೊಂಡಂತೆ ಇತರ ಮಾವಿನ ತಳಿಗಳಿಗಿಂತ ದೊಡ್ಡದಾಗಿದೆ. ಅದರಿಂದ ಸುಬ್ರತ್ ಅವರು ತುಂಬಾ ಆಕರ್ಷಿತರಾಗಿದ್ದರು. ಅಚ್ಚರಿ ಎಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈ ಮಾವಿನ ಹಣ್ಣುಗಳು ಕೆಜಿಗೆ 2.5 ಲಕ್ಷ ರೂ. ಸುಬ್ರತ್ ಅವುಗಳ ಔಷಧೀಯ ಗುಣಗಳೇ ಅವುಗಳ ದುಬಾರಿ ಬೆಲೆಗೆ ಕಾರಣ ಎನ್ನುವುದನ್ನು ಉಲ್ಲೇಖಿಸುತ್ತಾರೆ. 2021ರ ಸಂಶೋಧನಾ ಲೇಖನವು ಈ ಮಾವುಗಳನ್ನು ಕ್ಯಾನ್ಸರ್ ವಿರೋಧಿ, ಉರಿಯೂತದ, ಆಂಟಿಮೈಕ್ರೊಬಿಯಲ್, ಆಂಟಿಆಕ್ಸಿಡೆಂಟ್ ಮತ್ತು ಇಮ್ಯುನೊಮಾಡ್ಯುಲೇಟರಿ ಗುಣಲಕ್ಷಣಗಳನ್ನು ಹೊಂದಿದೆ. ಇದರ







> "ನಾನು ಪ್ರತಿದಿನ ಎರಡು ಗಂಟೆಗಳ ನಿದ್ದೆಯನ್ನು ನನ್ನ ಆಸಕ್ತಿಯ ವಿಷಯಕ್ಕಾಗಿ ತ್ಯಜಿಸುತ್ತೇನೆ. ಕೆಲಸಕ್ಕೆ ಹೊರಡುವ ಮೊದಲು ನನ್ನ ಸಸ್ಯಗಳನ್ನು ನೋಡಿಕೊಳ್ಳಲು ಬೆಳಿಗ್ಗೆ 5 ಗಂಟೆಗೆ ಏಳುತ್ತೇನೆ. ನಾವು ಏನನ್ನಾದರೂ ಮಾಡಲು ಬಯಸಿದರೆ, ಅದರ ಬಗ್ಗೆ ಉತ್ಸಾಹದಿಂದಿರಬೇಕು. ಚಿಕ್ಕ ವಯಸ್ಸಿನಲ್ಲಿ ನನ್ನ ತಂದೆ ಬೆಳೆಸಿದ ಗಿಡಗಳೊಂದಿಗಿನ ಒಡನಾಟವನ್ನು ಮುಂದುರೆಸುವ ಮೂಲಕ ನಾನು ನನ್ನ ಒಳಗಿನ ಮಗುವನ್ನು ಜೀವಂತವಾಗಿಟ್ಟಿದ್ದೇನೆ. ನನ್ನ ತೋಟದಲ್ಲಿ ಅಪರೂಪದ ಸಸ್ಯಗಳನ್ನು ಇಡುವುದು ನನಗೆ ತುಂಬಾ ಇಷ್ಟ. ಕೆಲವೊಮ್ಮೆ ಇದು ಸವಾಲಾಗಿಯೂ ಇರುತ್ತದೆ. ಯಾವುದೇ ಅಪರೂಪದ ಸಸ್ಯವನ್ನು ಬೆಳೆಸಲು, ಅವುಗಳಿಗೆ ಅಗತ್ಯವಿರುವ ತಾಪಮಾನ ಮತ್ತು ತೇವಾಂಶ ಮತ್ತು ಮಡಕೆಯ ಗಾತ್ರದ ಬಗ್ಗೆ ವಿವರವಾದ ಅಧ್ಯಯನವನ್ನು ಮಾಡಬೇಕು."

ಸೇವನೆಯು ಸ್ತನ ಕ್ಯಾನ್ಸರ್ ನಿರ್ವಹಣೆಯಲ್ಲಿ ಸಂಭಾವ್ಯವಾಗಿ ಪ್ರಯೋಜನಕಾರಿಯಾಗಿದೆ ಎನ್ನುವುದನ್ನು ತಿಳಿಸಿದೆ.

ಬಹುರಾಷ್ಟ್ರೀಯ ಕಂಪನಿಯಲ್ಲಿ ಇಂಜಿನಿಯರ್ ಆಗಿದ್ದರೂ, ತೋಟಗಾರಿಕೆಯ ಬಗೆಗಿನ ಅವರ ಒಲವು ಅಗಾಧವಾದದ್ದು. ಅವರ ಕೆಲಸದ ಜೊತೆಗೆ 400 ಸಸ್ಯಗಳ ಉದ್ಯಾನವನ್ನೂ ಅವರು ನಿರ್ವಹಿಸುತ್ತಾರೆ. ಇದರಲ್ಲಿ 100 ವಿಧದ ನೀರು ನೈದಿಲೆಗಳು ಮತ್ತು ಕಮಲಗಳು, 10 ವಿಧದ ಆರ್ಕಿಡ್‌ಗಳು, 20 ವಿಧದ ಅಡೆನಿಯಮ್, ಮಿಯಾಜಾಕಿ ಮಾವು, ರೇನ್ ಬೋ ಕಬ್ಬು, ಸೇರಿದಂತೆ 10 ಅಪರೂಪದ ಸಸ್ಯಗಳು ಮತ್ತು ಸಹಸ್ರದಳ ಕಮಲವೂ ಸೇರಿವೆ. ಸುಬ್ರತ್ ಅವರು ತಮ್ಮ ಮನೆಯ ನೆಲ ಮಹಡಿ, ಬಾಲ್ಕನಿ ಮತ್ತು ಟೆರೇಸ್ ಜಾಗವನ್ನು ಬಳಸಿಕೊಂಡು 4,000 ಚದರ ಅಡಿ ವಿಸ್ತೀರ್ಣದಲ್ಲಿ ಈ ಸಸ್ಯಗಳನ್ನು ಬೆಳೆಸುತ್ತಾರೆ. ನಗರ ಪ್ರದೇಶಗಳಲ್ಲಿ ಕೃಷಿಯ ಖುಷಿಯನ್ನು ಸವಿಯಲು ಸುಬ್ರತ್ ಮಾದರಿ.


पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JUNE 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-06-2024



## 64.2 ಕೋಟಿ ಮತದಾನ: ಭಾರತ ವಿಶ್ವದಾಖಲೆ

2024ರ ಲೋಕಸಭೆ ಚುನಾವಣೆಯಲ್ಲಿ 31.2 ಕೋಟಿ ಮಹಿಳೆಯರು ಸೇರಿದಂತೆ 64.2 ಕೋಟಿ ಮತದಾರರು ಭಾಗವಹಿಸುವ ಮೂಲಕ ಭಾರತ ವಿಶ್ವ ದಾಖಲೆ ನಿರ್ಮಿಸಿದೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ರಾಜೀವ್ ಕುಮಾರ್, ಏಪ್ರಿಲ್ 18ರಂದು ಪ್ರಾರಂಭವಾಗಿ ಜೂನ್ 1ರಂದು ಕೊನೆಗೊಂಡ ವಿಶ್ವದ ಅತಿದೊಡ್ಡ ಚುನಾವಣಾ ಪ್ರಕ್ರಿಯೆಯಲ್ಲಿ 68,000 ಕ್ಕೂ ಹೆಚ್ಚು ಮೇಲ್ವಿಚಾರಣಾ ತಂಡಗಳು, 1.5 ಕೋಟಿ ಮತಗಟ್ಟೆ ಮತ್ತು ಭದ್ರತಾ ಸಿಬ್ಬಂದಿ ಭಾಗಿಯಾಗಿದ್ದಾರೆ ಎಂದಿದ್ದಾರೆ.



## 16 ವರ್ಷ ಮೀರಿದವರಿಗೆ ಪ್ರತ್ಯೇಕ ತರಗತಿ

ಶಾಲೆಯಿಂದ ಹೊರಗುಳಿದ 16 ವರ್ಷಗಳ ವಯೋಮಿತಿ ದಾಟಿದ ಮಕ್ಕಳಿಗೆ ಪ್ರತ್ಯೇಕ ತರಗತಿಗಳನ್ನು ನಡೆಸಲು ರಾಜ್ಯದ ವಿವಿಧೆಡೆ 250 ಶಾಲೆಗಳನ್ನು ಗುರುತಿಸಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಸ್ಥಳೀಯ ಸಂಸ್ಥೆಗಳ ನೆರವಿನಿಂದ ಮನೆಮನೆ ಸಮೀಕ್ಷೆ ನಡೆಸಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನಗರಾಭಿವೃದ್ಧಿ ಹಾಗೂ ಪೌರಾಡಳಿತ ಇಲಾಖೆಗಳ ಸಹಯೋಗದಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಕೈಗೊಂಡ ಸಮೀಕ್ಷೆಯಲ್ಲಿ ಶಾಲೆ ತೊರೆದ ಗ್ರಾಮೀಣ ಪ್ರದೇಶದ 46 ಸಾವಿರ ಮಕ್ಕಳು ಸೇರಿದಂತೆ ಒಟ್ಟು 74 ಸಾವಿರ ಮಕ್ಕಳನ್ನು ಪತ್ತೆ ಮಾಡಲಾಗಿತ್ತು.

ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಬಹುತೇಕರು 3, 4, 5, 8ನೇ ತರಗತಿ ಪೂರೈಸಿದ್ದಾರೆ. 16 ವರ್ಷದ ಒಳಗೆ ಇರುವವರನ್ನು ಅವರ ವಯೋಮಿತಿಗೆ ಅನುಗುಣವಾಗಿ ಆಯಾ ತರಗತಿಗಳಿಗೆ ಸಮೀಪದ ಶಾಲೆಗಳಿಗೆ ದಾಖಲು ಮಾಡಲಾಗಿದೆ. ಅವರಲ್ಲಿ 16 ವರ್ಷಗಳ ಮಿತಿ ದಾಟಿದವರಿಗೆ ಯಾವ ತರಗತಿಗೆ ಸೇರಿಸಬೇಕು ಎಂಬ ಗೊಂದಲ ಮುಂದುವರಿದಿತ್ತು. ಕೊನೆಗೆ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ (ಎನ್‌ಐಒಎಸ್) 10ನೇ ತರಗತಿಗೆ ನೋಂದಣಿ ಮಾಡಿಸಿ, ಪರೀಕ್ಷೆ ಬರೆಸಲಾಗಿತ್ತು. ಗ್ರಾಮ ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಗ್ರಂಥಾಲಯಗಳಲ್ಲಿ ಅವರು ಓದಲು ಅಗತ್ಯವಾದ ಪುಸ್ತಕ, ಸೌಕರ್ಯ ಒದಗಿಸಲಾಗಿತ್ತು.

16 ವರ್ಷ ವಯೋಮಿತಿ ಮೀರಿದ 1,330 ಮಕ್ಕಳನ್ನು ಕಳೆದ ವರ್ಷ ರಾಷ್ಟ್ರೀಯ ಮುಕ್ತ ಶಾಲೆಗೆ ನೋಂದಣಿ ಮಾಡಿಸಿ, ಪರೀಕ್ಷೆ ಬರೆಸಲಾಗಿತ್ತು. ಆದರೆ ಶೇ. 80ರಷ್ಟು ಮಕ್ಕಳು ತೇರ್ಗಡೆಯಾಗಿಲ್ಲ. ಅನುತ್ತೀರ್ಣರಾದವರು ಮತ್ತೆ ಪರೀಕ್ಷೆಗೆ ಕುಳಿತುಕೊಳ್ಳದ ಕಾರಣ ಅರ್ಧಕ್ಕೆ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇಂತಹ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಮುಂದಾಗಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಮೂಲಕ ವಯೋಮಿತಿ ಮೀರಿದ ಮಕ್ಕಳಿಗೆ 10ನೇ ತರಗತಿ ಉತ್ತೀರ್ಣರಾಗಲು ಅನುಕೂಲವಾಗುವಂತೆ ತರಗತಿಗಳನ್ನು ನಡೆಸಲು ರಾಜ್ಯದ 250 ಶಾಲೆಗಳಲ್ಲಿ ವ್ಯವಸ್ಥೆ ಮಾಡಿದೆ. ಮುಕ್ತ ಶಾಲೆಗೆ ನೋಂದಣಿ ಮಾಡಿಕೊಳ್ಳುವ ವಿದ್ಯಾರ್ಥಿಗಳು ಇಂತಹ ಶಾಲೆಗಳಲ್ಲಿ ತರಗತಿಗಳಿಗೆ ಹಾಜರಾಗಬಹುದು. ಸ್ಥಳೀಯ ಸಂಸ್ಥೆಗಳ ಗ್ರಂಥಾಲಯಗಳ ಮೂಲಕ ಅಗತ್ಯ ಪಠ್ಯಪುಸ್ತಕ, ಕಲಿಕಾ ಸಾಮಗ್ರಿ ಪಡೆದುಕೊಳ್ಳಬಹುದು.

## ಪಿಒಕೆ ನಮ್ಮ ಭೂಭಾಗವಲ್ಲ: ಪಾಕ್ ಒಪ್ಪಿಗೆ

ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ನಮ್ಮದಲ್ಲ. ಅದೊಂದು ವಿದೇಶಿ ನೆಲವಾಗಿದ್ದು, ಆ ಪ್ರಾಂತ್ಯದ ಮೇಲೆ ನಮಗೆ ಯಾವುದೇ ಅಧಿಕಾರ ಇಲ್ಲ ಎಂದು ಪಾಕಿಸ್ತಾನ ಸರಕಾರ ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಒಪ್ಪಿಕೊಂಡಿದೆ. 75 ವರ್ಷಗಳ ಬಳಿಕ ಮೊದಲ




ಬಾರಿಗೆ ಪಾಕಿಸ್ತಾನ ಸರಕಾರವೇ ನೇರವಾಗಿ ಪಿಒಕೆ ನಮ್ಮ ನೆಲವಲ್ಲ, ವಿದೇಶಿ ಭೂಭಾಗ ಎಂದು ಹೇಳಿರುವುದು 'ಪಿಒಕೆ ನಮ್ಮದು' ಎಂಬ ಭಾರತದ ವಾದಕ್ಕೆ ಪುಷ್ಟಿ ಸಿಕ್ಕಂತಾಗಿದೆ. ಜಾಗತಿಕ ವೇದಿಕೆಗಳಲ್ಲಿ ಪಾಕ್ ಸರಕಾರದ ಈ ಹೇಳಿಕೆಯನ್ನು ಭಾರತ ದಾಖಲೆಯಾಗಿ ಸಲ್ಲಿಸಬಹುದಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಕಾಶ್ಮೀರಿ ಕವಿ ಹಾಗೂ ಪತ್ರಕರ್ತ ಅಹ್ಮದ್ ಫರ್ಹಾದ್ ಶಾ ಅವರ ಅಪಹರಣ ಪ್ರಕರಣದ ವಿಚಾರಣೆ ವೇಳೆ ಶೆಹಬಾಜ್ ಷರೀಫ್ ನೇತೃತ್ವದ ಸರಕಾರದ ಹೆಚ್ಚುವರಿ ಅಟಾರ್ನಿ ಜನರಲ್ 'ಪಾಕ್ ಆಕ್ರಮಿತ ಕಾಶ್ಮೀರ' ಪ್ರದೇಶ ಪಾಕಿಸ್ತಾನದ ಭಾಗವೇ ಅಲ್ಲ ಎಂದು ಒಪ್ಪಿಕೊಂಡಿದ್ದಾರೆ.

ಫರ್ಹಾದ್ ಶಾ ಅವರನ್ನು ಪಾಕಿಸ್ತಾನ ಗುಪ್ತಚರ ಸಂಸ್ಥೆ ಅಪಹರಣ ಮಾಡಿದೆ. ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಕೋರಿ ಅವರ ಪತ್ನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾ.ಮೊಹ್ಸಿನ್ ಅಖ್ತರ್ ಕಯಾನಿ ಅವರು, ಕೂಡಲೇ ಅಪಹೃತ ವ್ಯಕ್ತಿಯನ್ನು ಕೋರ್ಟ್ ಮುಂದೆ ಹಾಜರುಪಡಿಸುವಂತೆ ಸೂಚಿಸಿದರು. ಈ ವೇಳೆ ಸರಕಾರದ ಪರವಾಗಿ ಹಾಜರಾದ ಹೆಚ್ಚುವರಿ ಅಟಾರ್ನಿ ಜನರಲ್, "ಫರ್ಹಾದ್ ಶಾ ಅವರು ಪಾಕ್ ಆಕ್ರಮಿತ ಕಾಶ್ಮೀರದ ಪೊಲೀಸ್ ಕಸ್ಟಡಿಯಲ್ಲಿದ್ದಾರೆ. ಹೀಗಾಗಿ ಅವರನ್ನು ಕೋರ್ಟ್ ಎದುರು ಹಾಜರುಪಡಿಸುವುದು ಕಷ್ಟಸಾಧ್ಯ," ಎಂದು ಹೇಳಿದರು. ಯಾವ ಕಾರಣಕ್ಕೆ ಕೋರ್ಟ್‌ಗೆ ಹಾಜರು ಪಡಿಸಲು ಸಾಧ್ಯವಿಲ್ಲ ಎಂಬ ನ್ಯಾಯಮೂರ್ತಿ ಕಯಾನಿ ಮರು ಪ್ರಶ್ನೆಗೆ ಉತ್ತರ ನೀಡಿದ ಹೆಚ್ಚುವರಿ ಅಟಾರ್ನಿ ಜನರಲ್, "ಪಿಒಕೆ ವಿದೇಶಿ ಭೂಭಾಗ. ಅದಕ್ಕೆ ಪ್ರತ್ಯೇಕ ಸಂವಿಧಾನವಿದೆ, ನ್ಯಾಯಾಲಯವಿದೆ. ಪಾಕ್ ಕೋರ್ಟ್ ತೀರ್ಪುಗಳು ಅಲ್ಲಿಗೆ ಅನ್ವಯವಾಗುವುದಿಲ್ಲ. ಹೀಗಿರುವಾಗ ಅವರನ್ನು ಹೇಗೆ ಇಲ್ಲಿನ ಕೋರ್ಟ್‌ಗೆ ಕರೆತರಲು ಸಾಧ್ಯ," ಎಂದು ವಾದ ಮುಂದಿಟ್ಟರು. ಪಿಒಕೆ ವಿದೇಶಿ ನೆಲವಾಗಿದ್ದರೆ ಪಾಕಿಸ್ತಾನದ ಸೇನೆ ಹಾಗೂ ರೇಂಜರ್‌ಗಳು ಅಲ್ಲಿಗೆ ಹೇಗೆ ಪ್ರವೇಶ ಪಡೆದರು ಎಂದು ನ್ಯಾಯಾಲಯ ಪ್ರಶ್ನಿಸಿತು. ಪಾಕಿಸ್ತಾನ ಗುಪ್ತಚರ ಸಂಸ್ಥೆಗಳು ಬಲವಂತವಾಗಿ ಜನರ ಅಪಹರಣ ಮಾಡುತ್ತಿರುವುದು ನ್ಯಾಯೋಚಿತವಲ್ಲ ಎಂದು ಸರಕಾರವನ್ನು ನ್ಯಾ. ಕಯಾನಿ ತರಾಟೆಗೆ ತೆಗೆದುಕೊಂಡರು.

## ಹಿಂದೂ ಮುಸ್ಲಿಂ ವಿವಾಹ ಕ್ರಮಬದ್ಧವಲ್ಲ




ಮುಸ್ಲಿಂ ಪುರುಷ ಹಾಗೂ ಹಿಂದೂ ಮಹಿಳೆಯ ನಡುವಣ ವಿವಾಹ ಮುಸ್ಲಿಂ ವೈಯಕ್ತಿಕ ಕಾನೂನಿನಡಿ ಅಸಿಂಧು ಎಂದು ಮಧ್ಯಪ್ರದೇಶ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಮುಸ್ಲಿಂ ಪುರುಷ–ಹಿಂದು ಮಹಿಳೆ ವಿಶೇಷ ವಿವಾಹ ಕಾಯ್ದೆಯಡಿ ಮದುವೆ ಮಾಡಿಕೊಡಿದ್ದರೂ, ಮುಸ್ಲಿಂ ವೈಯಕ್ತಿಕ ಕಾನೂನಿನಡಿ ಅದನ್ನು ಕ್ರಮಬದ್ಧ ಎಂದು ಪರಿಗಣಿಸಲಾಗುವುದಿಲ್ಲ ಎಂದು ನ್ಯಾ। ಗುರು ಪಾಲ್ ಸಿಂಗ್ ಅಹ್ಲುವಾಲಿಯಾ ಅವರಿದ್ದ ಪೀಠ ಹೇಳಿದೆ.

ಮಹಮದೀಯ ಕಾನೂನಿನ ಪ್ರಕಾರ, ಮೂರ್ತಿ ಪೂಜಕ ಅಥವಾ ಅಗ್ನಿ ಆರಾಧನೆ ಮಾಡುವ ಯುವತಿಯ ಜತೆ ಮುಸ್ಲಿಂ ಯುವಕನ ವಿವಾಹ ಅಸಿಂಧುವಾಗುತ್ತದೆ. ವಿಶೇಷ ವಿವಾಹ ಕಾಯ್ದೆಯಡಿ ಅಂತಹ ವಿವಾಹ ನೋಂದಣಿಯಾದರೂ ಅದು ಕ್ರಮಬದ್ಧ ವಿವಾಹ ಎನಿಸಿಕೊಳ್ಳುವುದಿಲ್ಲ ಎಂದು ಮೇ 27ರಂದು ಪ್ರಕರಣವೊಂದರಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದೆ. ಮುಸ್ಲಿಂ ವೈಯಕ್ತಿಕ ಕಾನೂನಿನಡಿ ನಿರ್ಬಂಧವಿರುವ ವಿವಾಹಗಳು ವಿಶೇಷ ವಿವಾಹ ಕಾಯ್ದೆಯಡಿ ಮದುವೆಯಾದಾಕ್ಷಣ ಕಾನೂನುಬದ್ಧವಾಗುವುದಿಲ್ಲ. ನಿರ್ಬಂಧಿ ತವಲ್ಲದ ಸಂಬಂಧ ಹೊಂದಿರುವವರು ಮಾತ್ರವೇ ವಿಶೇಷ ವಿವಾಹ ಕಾಯ್ದೆಯಡಿ ವಿವಾಹ ಮಾಡಿಕೊಳ್ಳಬಹುದು ಎಂದು ಹೇಳಿದೆ.

ಮುಸ್ಲಿಂ ಪುರುಷ ಹಾಗೂ ಹಿಂದು ಯುವತಿ ಇಬ್ಬರೂ ವಿಶೇಷ ವಿವಾಹ ಕಾಯ್ದೆ ಯಡಿ ಮದುವೆ ನೋಂದಣಿ ಮಾಡಿಕೊ ಳ್ಳುತ್ತಾರೆ. ಆದರೆ ಇಬ್ಬರೂ ಧರ್ಮವನ್ನು ಬದಲಿಸಿಕೊಳ್ಳುವುದಿಲ್ಲ. ವಿವಾಹ ನೋಂದಣಿಗೆ ಹಾಜರಾದಾಗ ಅವರಿಗೆ ರಕ್ಷಣೆ ನೀಡಬೇಕು ಎಂದು ವಕೀಲರು ಕೋರಿದ್ದರು. ಆದರೆ ಪೊಲೀಸ್ ಭದ್ರತೆ ನೀಡಲು ಕೋರ್ಟ್ ನಿರಾಕರಿಸಿತು.

## ಲೋಕಸಭಾ ಚುನಾವಣೆ: ಎನ್‌ಡಿಎಗೆ ಸರಳ ಬಹುಮತ



ಲೋಕಸಭೆ ಚುನಾವಣೆಯ ಎಲ್ಲ 543 ಕ್ಷೇತ್ರಗಳ ಫಲಿತಾಂಶ ಜೂನ್ 4, 2024ರಂದು ಹೊರಬಿದ್ದಿದೆ. ಎನ್‌ಡಿಎ 292 ಸ್ಥಾನಗಳನ್ನು ಪಡೆದು ಸರಳ ಬಹುಮತ ಗಳಿಸಿದರೆ, ಐಎನ್‌ಡಿಐಎ ಒಕ್ಕೂಟ 234 ಸ್ಥಾನಗಳಿಸಿ ತನ್ನ ಬಲವನ್ನು ಹೆಚ್ಚಿಸಿಕೊಂಡಿದೆ. ನಿರೀಕ್ಷಿತ ಮಟ್ಟದ ಯಶ ಸಾಧಿಸದಿದ್ದರೂ, 2019ರ ಲೋಕಸಭಾ ಚುನಾವಣೆಗಿಂತಲೂ 63 ಸ್ಥಾನಗಳ ಕುಸಿತ ಕಂಡರೂ ಭಾರತೀಯ ಜನತಾ ಪಕ್ಷ (ಬಿಜೆಪಿ) 240 ಸ್ಥಾನಗಳಲ್ಲಿ ಗೆಲುವಿನೊಂದಿಗೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಕಾಂಗ್ರೆಸ್ 99 ಸ್ಥಾನಗಳೊಂದಿಗೆ ನಂತರದ ಸ್ಥಾನ ಪಡೆದ ಕಾಂಗ್ರೆಸ್ ತನ್ನ ಲೋಕಸಭಾ ಕ್ಷೇತ್ರಗಳನ್ನು ಹೆಚ್ಚಿಸಿಕೊಂಡಿದೆ. ಲೋಕಸಭೆಯ 542 ಸ್ಥಾನಗಳಿಗೆ ಜೂನ್ 4ರಂದು ದೇಶದಾದ್ಯಂತ ಮತ ಎಣಿಕೆ ನಡೆದಿತ್ತು. ಈ ಮೊದಲು ಬಿಜೆಪಿಯ ಸೂರತ್ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಅಲ್ಲದೆ 1962ರ ನಂತರ ಮೂರನೇ ಬಾರಿಗೆ ಬಹುಮತ ಪಡೆದ ಒಕ್ಕೂಟವಾಗಿ ಎನ್‌ಡಿಎ ಗುರುತಿಸಿಕೊಂಡಿದೆ.

## ವೈಷ್ಣೋದೇವಿಯಲ್ಲಿ ಸಸಿ ಪ್ರಸಾದ

ಜಮ್ಮು: ದೇವಸ್ಥಾನಗಳಲ್ಲಿ ಸಿಹಿ ಪದಾರ್ಥ ಇಲ್ಲವೇ ಅನ್ನವನ್ನು ಪ್ರಸಾದವಾಗಿ ನೀಡುವುದು ಸಾಮಾನ್ಯ. ಆದರೆ, ಜಮ್ಮುವಿನ ಪ್ರಸಿದ್ಧ ತೀರ್ಥಕ್ಷೇತ್ರ ವೈಷ್ಣೋದೇವಿ ಮಂದಿರದಲ್ಲಿ ಇನ್ನು ಮುಂದೆ ಭಕ್ತರಿಗೆ ಸಸಿಗಳನ್ನು ಪ್ರಸಾದವಾಗಿ ನೀಡಲಾಗುತ್ತದೆ. ಈ ಕುರಿತು ತೀರ್ಥ ಕ್ಷೇತ್ರದ ಆಡಳಿತ ಮಂಡಳಿ ನಿರ್ಧರಿಸಿದ್ದು, ಮಂಡಳಿ ಆರಂಭಿಸಿದ ವೈಷ್ಣವಿ ವಾಟಿಕಾ ನರ್ಸರಿಯಿಂದ ಭಕ್ತರಿಗೆ ಸಸಿಗಳನ್ನು ಪ್ರಸಾದವಾಗಿ ನೀಡಲಾಗುತ್ತದೆ. ಜೂನ್ 5 ವಿಶ್ವ ಪರಿಸರ ದಿನದಂದು ಕಾತ್ರಾ ಬೇಸ್ ಕ್ಯಾಂಪ್‌ನಲ್ಲಿ ನರ್ಸರಿ ಉದ್ಘಾಟನೆಗೊಂಡಿದೆ. ಈ ನೂತನ ನರ್ಸರಿಯಲ್ಲಿ 40 ವಿವಿಧ ತಳಿಯ ಸಸ್ಯಗಳಿದ್ದು, ಪರಿಸರ ಜಾಗೃತಿಗಾಗಿ ಭಕ್ತರಿಗೆ ಸಸಿಗಳನ್ನು ನೀಡುವ ಯೋಜನೆ ರೂಪಿಸಲಾಗಿದೆ ಎಂದು ಮಂಡಳಿಯ ಅಧಿಕಾರಿ ಅಂಶುಲ್ ಗಾರ್ಗ್ ತಿಳಿಸಿದ್ದಾರೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.